ಕ್ರಾಂತಿಯ ಕಿಡಿ

# ಕಾಯಕ ಯೋಗಿ

ಸಂಪಾದಕರು : ಬಿ.ಕೆ. ಅರುಣಜ್ಯೋತಿ

KAYAKAYOGI - Morning Daily

ಕನ್ನಡ ದಿನಪತ್ರಿಕೆ

| ಮಂಡ್ಯ Mandya | ಸಂಪುಟ - 04 Volume - 04 | ಸಂಚಿಕೆ - 70 Issue - 70 | RNI No.KARKAN/2018/77805 POST NO. KA/SK/MND/999/2019-2021 | ಮಂಗಳವಾರ Tuesday | 22-06-2021 | ಪುಟ - 04 Page - 04 | ಬೆಲೆ-ರೂ. 02 Price - 02 | ಸಂಪರ್ಕ 9980605484 | E-mail kayakayoginews@gmail.com |
|---|---|---|---|---|---|---|---|---|---|




# ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ

## ಸಿಎಂ ಯಡಿಯೂರಪ್ಪ ಘೋಷಣೆ

ಬೆಂಗಳೂರು : 'ಕೋವಿಡ್ ಸಂಕಷ್ಟದ ಕಾರಣಕ್ಕೆ ಪ್ರಸಕ್ತ ಸಾಲಿನಲ್ಲಿ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ನೀಡುವ ಉದ್ದೇಶದ ಹೊಂದಲಾಗಿದ್ದು, 30.26 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 19,370 ಕೋಟಿ ಅಲ್ಪಾವಧಿ ಬೆಳೆ ಸಾಲ ನೀಡುವ ಗುರಿ ಹೊಂದಲಾಗಿದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.



'ರೈತರಿಗೆ ಮತ್ತು ಸ್ತ್ರೀ ಶಕ್ತಿ ಗುಂಪುಗಳಿಗೆ ಸಾಲ ವಿತರಿಸುವ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿ ಮಾತನಾಡಿದ ಅವರು, '60 ಲಕ್ಷ ರೈತರಿಗೆ ಶೇ 3 ಬಡ್ಡಿ ದರದಲ್ಲಿ 1,440 ಕೋಟಿ ಮಧ್ಯಮಾವಧಿ, ದೀರ್ಘಾವಧಿ ಸಾಲ ವಿತರಿಸಲು ಗುರಿ ಹೊಂದಲಾಗಿದೆ' ಎಂದರು.

'ಅಲ್ಲದೆ, 2021–22ನೇ ಸಾಲಿನಲ್ಲಿ 40 ಲಕ್ಷ ಸ್ತ್ರೀ ಶಕ್ತಿ ಗುಂಪುಗಳಿಗೆ 1,400 ಕೋಟಿ ಸಾಲ ಗುರಿ ಹೊಂದಲಾಗಿದೆ. ಮೇ ಅಂತ್ಯಕ್ಕೆ 6,700 ಗುಂಪುಗಳಿಗೆ 233.33 ಕೋಟಿ ಸಾಲ ವಿರತರಿಸಲಾಗಿದೆ' ಎಂದೂ ವಿವರಿಸಿದರು.

'ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಈವರೆಗೆ 2.50 ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ರಚನೆ ಮಾಡಲಾಗಿದ್ದು, 32 ಲಕ್ಷ ಸದಸ್ಯರಿದ್ದಾರೆ. ಕಳೆದ ವರ್ಷ ಕೃಷಿ ಕ್ಷೇತ್ರದಲ್ಲಿ 25. 67 ಲಕ್ಷ ರೈತರಿಗೆ 16,451 ಕೋಟಿ ಅಲ್ಪಾವಧಿ ಸಾಲ, 52 ಸಾವಿರ ರೈತರಿಗೆ 1260.12 ಕೋಟಿ ಮಧ್ಯಮಾವಧಿ, ದೀರ್ಘಾವಧಿ ಸಾಲ ವಿತರಿಸುವ ಗುರಿಗೆ ಎದುರಾಗಿ ಶೇ 114ರಷ್ಟು ಸಾಧನೆ ಮಾಡಲಾಗಿದೆ. 57 ಲಕ್ಷ ರೈತರಿಗೆ ಹೈನುಗಾರಿಕೆಗೆ 105.64 ಕೋಟಿ ಸಾಲ ನೀಡಲಾಗಿದೆ' ಎಂದರು.

'ಕೋವಿಡ್ ಕಾರಣಕ್ಕೆ ರೈತರ ಮತ್ತು ಸ್ವಸಹಾಯ ಸಂಘಗಳ ಸಮಸ್ಯೆಯನ್ನು ಮನಗಂಡು, ಸಾಲ ಮರು ಪಾವತಿ ಅವಧಿಯನ್ನು ಮೂರು ತಿಂಗಳ ಅವಧಿಗೆ ವಿಸ್ತರಿಸಿ ಈಗಾಗಲೇ ಆದೇಶ ಹೊರಡಿಸಲಾಗಿದೆ. ಇದರಿಂದ 6.17 ಲಕ್ಷ ರೈತರು 65,500 ಸ್ವಸಹಾಯ ಸಂಘಗಳು 8.15 ಸದಸ್ಯರಿಗೆ ಅನುಕೂಲವಾಗಿದೆ'ಎಂದರು.

'ಕೋವಿಡ್ ಸಂದರ್ಭದಲ್ಲಿ ಸಹಕಾರಿ ಸಂಘಗಳು 4.62 ಕೋಟಿಯ ವೈದ್ಯಕೀಯ ಸಲಕರಣೆಗಳು, ಆಂಬುಲೆನ್ಸ್, ಆಹಾರ ಕಿಟ್ ಉಚಿತವಾಗಿ ನೀಡಿವೆ. ಅಲ್ಲದೆ, ಮುಖ್ಯಮಂತ್ರಿ ಪರಿಹಾರ ನಿಧಿಗೆ 58 ಕೋಟಿ ದೇಣಿಗೆ ನೀಡಿ ಸಾಮಾಜಿಕ ಕಳಕಳಿ ಮೆರೆದಿದೆ' ಎಂದೂ ಶ್ಲಾಘಿಸಿದರು.

'ನಮ್ಮದು ರೈತಪರ ಸರ್ಕಾರ. ಕೃಷಿ, ಆರೋಗ್ಯ ಮತ್ತು ಶಿಕ್ಷಣ ನಮ್ಮ ಸರ್ಕಾರದ ಆದ್ಯತೆಯ ಕ್ಷೇತ್ರಗಳು. ಎಲ್ಲರಿಗೂ ನಾನು, ನನಗಾಗಿ ಎಲ್ಲರೂ ಎಂಬ ಸಹಕಾರಿ ತತ್ವದಡಿ ಸ್ವಾಲಂಬಿ ಜೀವನ ನಡೆಸಲು ಸಾಲ ಸೌಲಭ್ಯ ನೀಡಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಯಾವುದೇ ಕೊರತೆ ಇಲ್ಲ' ಎಂದೂ ಮುಖ್ಯಮಂತ್ರಿ ತಿಳಿಸಿದರು.

ಸಹಕಾರಿ ಸಚಿವ ಎಸ್.ಟಿ. ಸೋಮಶೇಖರ್, ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಇದ್ದರು.

# ಜಿಲ್ಲೆಯಾದ್ಯಂತ ಯೋಗ ದಿನಾಚರಣೆ : ಲಸಿಕೆಗೆ ಸಚಿವ ಚಾಲನೆ

## ಮನೆ ಮನೆಯಲ್ಲಿ ಯೋಗಾಭ್ಯಾಸ



ಮಂಡ್ಯ : ನಗರದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನ ಐ.ಎಸ್.ಟಿ.ಇ. ಅಧ್ಯಾಯಗಳು, ನೆಹರು ಯುವ ಕೇಂದ್ರ ಮಂಡ್ಯ, ಯುವ ರೆಡ್‌ಕ್ರಾಸ್ ಸಂಸ್ಥೆ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು ಕ್ರೀಡಾ ವಿಭಾಗ ರವರುಗಳು ಮಂಡ್ಯದ ಪತಂಜಲಿ ಯೋಗ ಶಿಕ್ಷಣ ಸಮಿತಿ ರವರ ಸಂಯೋಜನೆಯೊಂದಿಗೆ ಜೂ.21 ಸೋಮವಾರದಂದು ಅಂತಾರಾಷ್ಟ್ರೀಯ ಯೋಗ ದಿನವನ್ನು ಕಾಲೇಜಿನ ಡಾ.ಎಚ್.ಡಿ. ಚೌಡಯ್ಯ ಸಭಾಂಗಣದಲ್ಲಿ ಆಚರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಆರ್. ಎಂ. ಮಹಾಲಿಂಗೇಗೌಡರು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರಸ್ತುತ ಪರಿಸ್ಥಿತಿಯಲ್ಲಿ ಯೋಗ ದಿನಾಚರಣೆಯ ಮಹತ್ವವನ್ನು ಒತ್ತಿಹೇಳಿದರು.

ಐ.ಎಸ್.ಟಿ.ಇ. ಅಧ್ಯಾಯದ ಅಧ್ಯಕ್ಷ ಹಾಗೂ ಯುವ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯಕ್ರಮಾಧಿಕಾರಿ ಡಾ.ಬಿ.ಎಸ್. ಶಿವಕುಮಾರ್ ಅವರು ಎಲ್ಲಾ ಕಾಲಕ್ಕೂ ಪರಿಸ್ಥಿತಿಗೂ ಯೋಗ ಕಲಿಕೆ ಮತ್ತು ಅಭ್ಯಾಸವನ್ನು ರೂಢಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಜಿಲ್ಲಾ ಸಂಚಾಲಕರಾದ ಯೋಗಗುರು ಶ್ರೀ ಶಂಕರನಾರಾಯಣ ಶಾಸ್ತ್ರಿಗಳು ಯೋಗದ ವಿವಿಧ ಆಸನಗಳನ್ನು ಪರಿಚಯಿಸಿ ಅದರ ಮಹತ್ವವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆಯವರು ಹಾಗೂ ನೆಹರೂ ಯುವ ಕೇಂದ್ರದವರು ಭಾಗವಹಿಸಿದ್ದರು. ಯುವ ರೆಡ್ ಕ್ರಾಸ್ ಕಾರ್ಯಕ್ರಮಾಧಿಕಾರಿ ಡಾ.ಬಿ.ಷಣ್ಮುಖ, ಐ.ಎಸ್.ಟಿ.ಇ. ಅಧ್ಯಾಯ ಕಾರ್ಯದರ್ಶಿ ಡಾ.ಎಂ.ಎನ್. ವೀಣಾ, ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿ ಡಾ.ರೇವಣೇಶ್, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಕಾರಿ ಎಂ.ಎ.ವೇಣುಗೋಪಾಲ್, ಲೆಕ್ಕಾಧಿಕಾರಿ ಎನ್.ವೈ.ಕೆ. ಎಚ್.ಎಂ. ಬಸವರಾಜು, ದೈಹಿಕ ಶಿಕ್ಷಣ ನಿರ್ದೇಶಕ ಅನಂತ ಪದ್ಮನಾಭ ಪ್ರಭು, ಯೋಗ ಶಿಕ್ಷಕಿ ಗೋಪಿಕಾ ಹಾಗೂ ವಿಭಾಗದ ಮುಖ್ಯಸ್ಥರುಗಳು, ಪ್ರಾಧ್ಯಾಪಕ–ಪ್ರಾಧ್ಯಾಪಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಜಿಲ್ಲೆಯ ಎಲ್ಲಾ ತಾಲ್ಲೂಕು ಹಾಗೂ ಹೋಬಳಿ ಕೇಂದ್ರಗಳಲ್ಲಿ ಕೋವಿಡ್ ನಿಯಮಾನುಸಾರವಾಗಿ ಯೋಗದಿನಾಚರಣೆಯನ್ನು ಆಚರಿಸಲಾಯಿತು.

**ಲಸಿಕೆಗೆ ಚಾಲನೆ :** ಮಂಡ್ಯ ಜಿಲ್ಲೆಯಲ್ಲಿ ಇವತ್ತು 55 ಸಾವಿರಕ್ಕೂ ಹೆಚ್ಚಾಗಿ ಲಸಿಕೆಯನ್ನು 45 ವರ್ಷ ಮೇಲ್ಪಟ್ಟವರಿಗೆ ನೀಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ನಾರಾಯಣಗೌಡ ತಿಳಿಸಿದರು.

ಅವರು ಇಂದು ಮದ್ದೂರಿನ ಮರಿಯಮ್ಮ ಶಾಲೆಯಲ್ಲಿ ಕೋವಿಡ್ ಲಸಿಕಾ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದು ಬಂದಿರುವ ಲಸಿಕೆಯನ್ನು ಪ್ರಯೋಗಿಸಲಾಗುತ್ತಿದೆ, ಈಗಾಗಲೇ ಬಂದಿರುವ ಲಸಿಕೆಯು ಮುಕ್ತಾಯವಾದ ನಂತರ ಇನ್ನೂ ಹೆಚ್ಚಾಗಿ ಲಸಿಕೆ ನೀಡುವಂತಹ ಕಾರ್ಯ ಕರ್ನಾಟಕ ಸರ್ಕಾರದಿಂದ ಆಗುತ್ತದೆ ಎಂದು ತಿಳಿಸಿದರು.

ಇಂದು ಮದ್ದೂರು ತಾಲೂಕಿನಲ್ಲಿ ಜಿಲ್ಲಾಧಿಕಾರಿ, ಶಾಸಕರಾದ ಡಿಸಿ ತಮ್ಮಣ್ಣ, ಆರೋಗ್ಯಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಕೋವಿಡ್ ಲಸಿಕೆಯನ್ನು ಪ್ರಯೋಗಿಸಲಾಗುತ್ತಿದೆ ಎಂದರು.

45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಿ ಅರ್ಧ ಗಂಟೆಗಳ ಕಾಲ ಅವರನ್ನು ನಿರೀಕ್ಷಣಾ ಕೊಠಡಿಯಲ್ಲಿ ಇರಿಸಲಾಗುತ್ತದೆ. ನಂತರ ಅವರಿಗೆ ಯಾವುದೇ ರೀತಿಯ ತೊಂದರೆಯ ಲಕ್ಷಣಗಳು ಕಂಡು ಬರದಿದ್ದಲ್ಲಿ ಅವರನ್ನು ಕಳುಹಿಸಲಾಗುತ್ತದೆ ಎಂದರು.

ಲಸಿಕೆ ಪಡೆದವರಲ್ಲಿ ಯಾವುದೇ ರೀತಿಯ ತಲೆಸುತ್ತು, ಜ್ವರ ಇತರೆ ಲಕ್ಷಣಗಳು ಕಂಡುಬಂದಲ್ಲಿ ಅವರನ್ನು ಶೀಘ್ರವೇ ಮತ್ತಷ್ಟು ಪರೀಕ್ಷೆಗೊಳಪಡಿಸಲಾಗುತ್ತದೆ ಎಂದರು.

ಇಂದು 55 ಸಾವಿರಕ್ಕೂ ಹೆಚ್ಚಾಗಿ ಲಸಿಕೆಯನ್ನು ನೀಡಿ ನಾಳೆ ಇದಕ್ಕೂ ಹೆಚ್ಚು ಲಸಿಕೆ ನೀಡುವಂತಹ ಕಾರ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಮದ್ದೂರು ಶಾಸಕರಾದ ಡಿ.ಸಿ.ತಮ್ಮಣ್ಣ, ಜಿಲ್ಲಾಧಿಕಾರಿ ಎಸ್.ಅಶ್ವತಿ, ಆರೋಗ್ಯಧಿಕಾರಿ ಧನಂಜಯ್, ಜಿಲ್ಲಾ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ದಿವ್ಯ ಪ್ರಭು ಇದ್ದರು.

## ಸನ್‌ಪ್ಯೂರ್ ಎಣ್ಣೆ ಕಾರ್ಖಾನೆ ಸ್ಥಳಾಂತರಕ್ಕೆ ಆಗ್ರಹ

ಶ್ರೀರಂಗಪಟ್ಟಣ : ಪಟ್ಟಣದ ಬೆಂಗಳೂರು–ಮೈಸೂರು ಹೆದ್ದಾರಿ ಬಳಿ ಇರುವ ಅಡುಗೆ ಎಣ್ಣೆ ತಯಾರಿಕಾ ಕಾರ್ಖಾನೆಯನ್ನು ಕೂಡಲೇ ಸ್ಥಳಾಂತರಗೊಳಿಸಿ ಜೊತೆಗೆ ಪುರಸಭೆಯಿಂದ ನೀಡಿರುವ ಪರವಾನಿಗೆ ರದ್ದುಪಡಿಸುವಂತೆ ಆಗ್ರಹಿಸಿ ಶ್ರೀರಂಗಪಟ್ಟಣ ನಾಗರೀಕ ವೇದಿಕೆ ಸದಸ್ಯರು ಕಾರ್ಖಾನೆ ಎದುರು ಯೋಗಾಭ್ಯಾಸ ಮಾಡಿ ವಿನೂತನ ಪ್ರತಿಭಟನೆ ನಡೆಸಿದರು.

ಪಟ್ಟಣದ ಕಾವೇರಿ ಹೊಸ ಬಡಾವಣೆಯಲ್ಲಿರುವ ಸನ್‌ಪ್ಯೂರ್ ಎಣ್ಣೆ ಕಾರ್ಖಾನೆ (ಎಂ.ಕೆ.ಆಗ್ರೋಟೆಕ್) ಎದುರು "ವಿಶ್ವ ದಿನಾಚರಣೆ" ಪ್ರಯುಕ್ತ ವೇದಿಕೆ ಪದಾಧಿಕಾರಿಗಳು ಯೋಗ ಪ್ರದರ್ಶಿಸುವ ಮೂಲಕ ಸ್ಥಳೀಯ ನಿವಾಸಿಗಳ ಆರೋಗ್ಯ ಉಳಿಸಿ ಎಂದು ಪ್ರತಿಭಟಿಸಿದರು.

# ಕೋವಿಡ್ ಲಸಿಕೆಯಿಂದ ಅಡ್ಡಪರಿಣಾಮವಿಲ್ಲ

## ಲಸಿಕಾ ಅಭಿಯಾನಕ್ಕೆ ಶಾಸಕ ಚಾಲನೆ



ಮಂಡ್ಯ : ಕೋವಿಡ್ ಲಸಿಕೆ ಪಡೆದಲ್ಲಿ ಯಾವುದೇ ಅಡ್ಡಪರಿಣಾಮವೂ ಇಲ್ಲ. ಭಯ ಬೇಡ, ಎಲ್ಲರೂ ಲಸಿಕೆ ಪಡೆದು ಕೋವಿಡ್ ಸೋಂಕಿನಿಂದ ದೂರ ಇರಿ ಎಂದು ಶಾಸಕ ಎಂ. ಶ್ರೀನಿವಾಸ್ ಸಲಹೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ, ಆರೋಗ್ಯ ಇಲಾಖೆ ವತಿಯಿಂದ ನಗರ ಬೀಡಿ ಕಾರ್ಮಿಕರ ಕಾಲೋನಿಯಲ್ಲಿರುವ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಕೋವಿಡ್ –19 ವಿಶೇಷ ಲಸಿಕಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಲಸಿಕೆ ಪಡೆದಲ್ಲಿ ತೊಂದರೆಯಾಗುತ್ತದೆ ಎಂಬ ಹಲವಾರು ಗೊಂದಲಗಳು ಇವೆ. ಆದರೆ, ಲಸಿಕೆ ಪಡೆಯದಿದ್ದರೆ ಮಾತ್ರ ತೊಂದರೆಯಾಗುತ್ತದೆಯೇ ಹೊರತು, ಲಸಿಕೆ ಪಡೆದಲ್ಲಿ ಜೀವ ಉಳಿಸಿಕೊಳ್ಳಲು ಸಾಧ್ಯ. ಇಲ್ಲದಿದ್ದಲ್ಲಿ ಜೀವ ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ನಗರಸಭಾಧ್ಯಕ್ಷ ಎಚ್.ಎಸ್. ಮಂಜು ಮಾತನಾಡಿ, ರಾಜ್ಯಾದ್ಯಂತ ಲಸಿಕಾ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮದ್ದೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಲಸಿಕಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಸಂದೇಶ ನೀಡಿದ್ದಾರೆ. ಯಾರೂ ಭಯ ಪಡುವ ಅಗತ್ಯವಿಲ್ಲಘಿ. ಎಲ್ಲರೂ ಲಸಿಕೆ ಪಡೆಯುವುದು ಕಡ್ಡಾಯವಾಗಿದೆ ಎಂದು ಹೇಳಿದರು.

ಮುಸ್ಲೀಮರಲ್ಲಿ ಲಸಿಕೆ ಬಗ್ಗೆ ಒಂದಷ್ಟು ಗೊಂದಗಳು ಇದ್ದವು. ಹಾಗಾಗಿ ಯಾರೂ ಲಸಿಕೆ ಪಡೆಯಲು ಮುಂದೆ ಬರುತ್ತಿರಲಿಲ್ಲಘಿ. ಇದನ್ನು ಮನಗಂಡ ಶಾಸಕ ಎಂ. ಶ್ರೀನಿವಾಸ್ ಅವರು ಮುಸ್ಲೀಂ ಧರ್ಮಗುರುಗಳ ಮೂಲಕ ಸಂದೇಶ ರವಾನಿಸಿದ್ದಾರೆ. ಎಲ್ಲರೂ ಲಸಿಕೆ ಪಡೆಯುವಂತೆ ಅವರ ಮೂಲಕ ಅರಿವು ಮೂಡಿಸಿದ್ದಾರೆ ಎಂದು ಹೇಳಿದರು.

# ಯೋಗಾಭ್ಯಾಸದಿಂದ ಆತ್ಮಬಲ ಹೆಚ್ಚಳ : ಸಂದೇಶ್

## 111 ಸಸಿನೆಟ್ಟು ಕಾಯಕಯೋಗಿ ಶಿವಕುಮಾರ್ ಜನ್ಮದಿನಾಚರಣೆ



ಮಂಡ್ಯ : ಯೋಗಭ್ಯಾಸ ಮಾಡುವುದರಿಂದ ಮನುಷ್ಯನ ಆತ್ಮಬಲ ಹೆಚ್ಚಾಗುವುದರ ಜೊತೆಗೆ ರೋಗದಿಂದ ಮುಕ್ತವಾಗಬಹುದೆಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್.ಸಂದೇಶ್ ಹೇಳಿದರು.

ನಗರದ ಸ್ವರ್ಣಸಂದ್ರ ಬಡಾವಣೆಯ ಪರಮಪೂಜ್ಯ ಡಾ.ಶ್ರೀ ಶಿವಕುಮಾರಮಹಾಸ್ವಾಮೀಜಿ ಉದ್ಯಾನವನದಲ್ಲಿ ಕಾಯಕ ಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್ ಅವರ ಜನ್ಮದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾಯಕಯೋಗಿ ಸಸ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿಶ್ವಯೋಗ ದಿನದಂದು ಮಾತ್ರ ಯೋಗವನ್ನು ತೋರ್ಪಡಿಕೆಗೆ ಮಾಡದೆ ಪ್ರತಿನಿತ್ಯ ಯೋಗವನ್ನು ಅಭ್ಯಾಸ ಮಾಡುವುದರಿಂದ ಸುದೀರ್ಘ ಆಯಸ್ಸು, ಸದೃಢ ಆರೋಗ್ಯವನ್ನು ಪಡೆಯಬಹುದಾಗಿದ್ದು ಕೋವಿಡ್‌ನಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಯೋಗಾಭ್ಯಾಸ ನಮ್ಮ ಆತ್ಮಬಲವನ್ನು ಹೆಚ್ಚಿಸುತ್ತದೆ ಎಂದರು.

ಶತಾಯುಷಿಗಳಾಗಿ ಬದುಕಿ ಕನ್ನಡನಾಡಿನ ಕೀರ್ತಿಯನ್ನು ದೇಶ ವಿದೇಶಗಳಲ್ಲಿ ಬೆಳಗಿದ ಕರ್ನಾಟಕರತ್ನ, ನಡೆದಾಡುವ ದೇವರೆಂದೆ ಮನೆಮಾತಾಗಿರುವ ಕೋಟ್ಯಾಂತರ ಭಕ್ತರ ಆರಾಧ್ಯ ದೈವ ಪೂಜ್ಯಸಿದ್ದಗಂಗಾಶ್ರೀಗಳು 111 ವರ್ಷಗಳ ತಮ್ಮ ಬದುಕಿನುದ್ದಕ್ಕೂ ನಡೆಸಿದ ತ್ರಿವಿಧ ದಾಸೋಹ ಸೇವೆಯ ಸ್ಮರಣಾರ್ಥವಾಗಿ ಪತ್ರಕರ್ತ ಎಂ.ಶಿವಕುಮಾರ್ ಅವರು ಜಿಲ್ಲೆಯ ವಿವಿದೆಡೆ 111 ಸಸಿಗಳನ್ನು ನೆಡುವ ಸಂಕಲ್ಪದ ಮೂಲಕ ಸಾರ್ಥಕ ಜನ್ಮದಿನೋತ್ಸವ ಆಚರಿಸಿಕೊಳ್ಳುತ್ತಿರುವುದು ಅಭಿನಂದನೀಯ ಹಾಗೂ ಅನುಕರಣೀಯ ಎಂದು ಶ್ಲಾಘಿಸಿದರು.

ಉದ್ಯಾನವನದಲ್ಲಿ ಸಸಿ ನೆಟ್ಟು ಮಾತನಾಡಿದ ರಾಷ್ಟ್ರಪ್ರಶಸ್ತಿ ಪುರಸ್ಕೃತೆ ಬಿ.ಎಸ್.ಅನುಪಮಾ ಪರಿಸರ ಸಂರಕ್ಷಣೆ ಇಂದಿನ ಅನಿವಾರ್ಯತೆ ಎಂಬುದನ್ನು ಪ್ರತಿಯೊಬ್ಬರೂ ಸಸ್ಯ ಸಂಕುಲವನ್ನು ಉಳಿಸಿ ಬೆಳೆಸುವ ದೀಕ್ಷೆಯನ್ನು ತೊಡುವುದು ಅನಿವಾರ್ಯವಾಗಿದೆ.

ಮಹಾಮಾರಿ ಕೋವಿಡ್ ಸೋಂಕಿಗೆ ಒಳಗಾದ ಸಹಸ್ರಾರು ಮಂದಿ ಆಕ್ಸಿಜನ್ ಕೊರತೆಯಿಂದ ಸಾವನ್ನಪ್ಪಿದ್ದಾರೆ. ಎಲ್ಲೆಡೆ ಆಕ್ಸಿಜನ್‌ಗಾಗಿ ಪರಿತಪಿಸುತ್ತಿರುವ ಪ್ರಸ್ತುತ ದಿನಮಾನದಲ್ಲಿ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಪರಿಸರವನ್ನು ಬೆಳೆಸಲು ಮುಂದಾಗಬೇಕೆಂದು ಸಲಹೆ ನೀಡಿದರು.

ಉದ್ಯಾನವನ್ನು ಸ್ವಚ್ಚಗೊಳಿಸಿ ಸಸಿಗಳನ್ನು ನೆಟ್ಟು ಮಾತನಾಡಿದ ಕಾಯಕಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್, ಕಳೆದ ಹತ್ತುವರ್ಷಗಳ ಹಿಂದೆ ಉದ್ಯಾನವನವನ್ನು ನಗರಸಭೆಯಿಂದ ದತ್ತು ಪಡೆದು ನೂರಾರು ಸಸಿಗಳನ್ನು ಬೆಳೆಸಿ ಪೋಷಣೆ ಮಾಡುತ್ತಾ ಬಂದಿರುವ ತಮಗೆ ಸಸ್ಯಾಂದೋಲನದ ಕಾಯಕ ತೃಪ್ತಿ ತಂದಿದೆ. ಜನ್ಮದಿನಾಚರಣೆ ಎಂದರೆ ಕೇಕ್ ಕತ್ತರಿಸಿ ಪಾರ್ಟಿ ಮಾಡುವುದಲ್ಲ ಈ ಭೂಮಿಯ ಋಣ ತೀರಿಸಲು ನಾವು ಬದುಕಿದ್ದಷ್ಟು ಕಾಲ ಪ್ರತಿ ವರ್ಷಕ್ಕೊಮ್ಮೆ ಸಸಿಯೊಂದನ್ನು ನೆಟ್ಟು ಮರ ಮಾಡಿದಾಗ ಹುಟ್ಟು ಹಬ್ಬಕ್ಕೆ ನಿಜವಾದ ಅರ್ಥ ಬರುತ್ತದೆ ಎಂದರು.

ಜಾನಪದ ಅಕಾಡೆಮಿ ಮಾಜಿ ಸದಸ್ಯ ಗಾಯಕ ಗೊರವಾಲೆ ಚಂದ್ರಶೇಖರ್ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕನ ಕುರಿತಾದ ಗೀತೆಯನ್ನು ಹಾಡಿ ರಂಜಿಸಿದರು. ಸಿದ್ದಗಂಗಾಶ್ರೀ ಸೇವಾ ಸಮಿತಿ ಅಧ್ಯಕ್ಷ ಉದ್ಯಮಿ ಎಂ.ಆರ್.ಮಂಜುನಾಥ್, ಕಾರ್ಯದರ್ಶಿ ಬಿ.ಕೆ.ಅರುಣಜ್ಯೋತಿ, ನಿರ್ದೇಶಕ ನಿಂಗರಾಜು, ತಬ್ರೈಸ್‌ಖಾನ್, ಬಂಕ್ ವೆಂಕಟೇಶ್, ಬಿಜೆಪಿಮುಖಂಡ ಸುರೇಶ್, ಜಯಕುಮಾರ್, ರಾಮಣ್ಣ, ಬಾಬು ಹಾಗೂ ಕಾಯಕ ಯೋಗಿ ಫೌಂಡೇಶನ್ ಸದಸ್ಯರು ಉಪಸ್ಥಿತರಿದ್ದರು.


ಇದೇ ಸಂದರ್ಭದಲ್ಲಿ ಪೌರ ಕಾರ್ಮಿಕರು ಹಾಗೂ ಸಾರ್ವಜನಿಕರಿಗೆ ದಾಸೋಹ ಏರ್ಪಡಿಸಲಾಗಿತ್ತು.



ಮಂಡ್ಯದ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪಿಇಎಸ್ ಶಿಕ್ಷಣ ಸಂಸ್ಥೆ, ನೆಹರು ಯುವಕೇಂದ್ರ, ಜಿಲ್ಲಾ ಆಯುಷ್ ಇಲಾಖೆ ಆಯೋಜಿಸಿದ್ದ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮವನ್ನು ಪ್ರಾಂಶುಪಾಲ ಡಾ.ಮಹಲಿಂಗೇಗೌಡ ಉದ್ಘಾಟಿಸಿದರು.

## ಮಂಡ್ಯ ಕೊರೊನಾ ಮೀಟರ್

**ಕೊರೋನಾ ಸೋಂಕು : 150 – ಸಾವು : 02**



ಮಂಡ್ಯ : ಜಿಲ್ಲೆಯ ವಿವಿಧ ತಾಲ್ಲೂಕುಗಳ 150 ಮಂದಿಗೆ ಸೋಮವಾರ ಕೊರೋನಾ ಸೋಂಕು ದೃಢಪಟ್ಟಿದ್ದು, 2 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ರೋಗಿಗಳಿಗೆ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.

ಮಂಡ್ಯ–22, ಮದ್ದೂರು–10, ಮಳವಳ್ಳಿ–11, ಪಾಂಡವಪುರ–13, ಶ್ರೀರಂಗಪಟ್ಟಣ–12, ಕೆ.ಆರ್.ಪೇಟೆ–54 ನಾಗಮಂಗಲ–28 ಮಂದಿಗೆ ಕೊರೋನಾ ಸೋಂಕು ಕಾಣಿಸಿಕೊಂಡಿದೆ. ಈ ದಿನ 285 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ 2268 ಸಕ್ರಿಯ ಪ್ರಕರಣಗಳಿವೆ. ಸರ್ಕಾರಿ ಆಸ್ಪತ್ರೆಯಲ್ಲಿ 279, ಕೋವಿಡ್‌ಕೇರ್ ಸೆಂಟರ್‌ನಲ್ಲಿ 747, ಖಾಸಗಿ ಆಸ್ಪತ್ರೆಯಲ್ಲಿ 55 ಮನೆಯಲ್ಲಿ 1187 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ವಿದ್ಯುತ್ ವ್ಯತ್ಯಯ

ಪಾಂಡವಪುರ : ಸೆಸ್ಕ್ ಉಪ ವಿಭಾಗದ ವ್ಯಾಪ್ತಿಯ 66/11 ಕೆ.ವಿ ದೊಡ್ಡಬ್ಯಾಡರಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿನ 11 ಕೆ.ವಿ ವಿದ್ಯುತ್ ಮಾರ್ಗಗಳಾದ ಎಫ್–1 ಕಾಳೇನಹಳ್ಳಿ, ಎಫ್–2 ಹೆಗ್ಗಡಹಳ್ಳಿ, ಎಫ್–5 ವದೇಸಮುದ್ರ ಹಾಗೂ ಎಫ್–6 ನುಗ್ಗಹಳ್ಳಿ ಫೀಡರ್‌ಗಳಲ್ಲಿ ಜೂ.22ರಿಂದ 30 ರವೆಗೆ ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆವರೆಗೆ ಈ ಭಾಗದಲ್ಲಿ ಉದ್ದೇಶಿತ ಕಾಳೇನಹಳ್ಳಿ ಏತ ನೀರಾವರಿಯ ವಿದ್ಯುತ್ ಕಾಮಗಾರಿ ಕೆಲಸ ನಿರ್ವಹಿಸ ಬೇಕಾಗಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಕ್ರಾಂತಿಯಕಿಡಿ
ಕಾಯಕಯೋಗಿ
KAYAKAYOGI-MORNING DAILY
ಕನ್ನಡ ದಿನಪತ್ರಿಕೆ
ಮಂಗಳವಾರ
22 ಜೂನ್ 2021


## ಸಹಾಯಧನ ನೀಡಲು ಅರ್ಜಿ

ಮಂಡ್ಯ : 2021-22 ನೇ ಸಾಲಿನಲ್ಲಿ ಕ್ರಿಶ್ಚಿಯನ್ ಅಭಿವೃದ್ಧಿ ಯೋಜನೆಯಡಿ ಚರ್ಚ್ ನವೀಕರಣ, ಆವರಣ ಗೋಡೆ, ಸಮುದಾಯ ಭವನ, ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳ ಯೋಜನೆಗಳಿಗೆ ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಈ ಸಂಬಂಧ ಈ ಸಮುದಾಯದ ಸಂಸ್ಥೆಯವರು, ಜಿಲ್ಲೆಯಲ್ಲಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿಯಲ್ಲಿ ಅರ್ಜಿಗಳನ್ನು ಪಡೆದು ಪ್ರಸ್ತಾವನೆ ಸಲ್ಲಿಸಬಹುದು. ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳ ಕಛೇರಿ, ಬಿಸಿಲು ಮಾರಮ್ಮ ದೇವಸ್ಥಾನದ ಪಕ್ಕ ಕೆರೆ ಬೀದಿ, ನಾಗಮಂಗಲ ರಸ್ತೆ ದೂ.ಸಂ:08232-297240 ಅನ್ನು ಸಂಪರ್ಕಿಸಬಹುದೆಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಮಂಡ್ಯದ ಪರಮಪೂಜ್ಯ ಡಾ.ಶ್ರೀ ಶಿವಕುಮಾರ ಮಹಾ ಸ್ವಾಮೀಜಿ ಉದ್ಯಾನದಲ್ಲಿ ಅನನ್ಯ ಹಾರ್ಟ್ ಹಾಗೂ ಸ್ವದೇಶಿ ಜಾಗರಣ ಮಂಚ್ ವತಿಯಿಂದ ವಿಶ್ವ ಜಾಗೃತಿ ದಿನಾಚರಣೆ ಪ್ರಯುಕ್ತ ಪೇಟೆಂಟ್ ಮುಕ್ತ ಲಸಿಕೆ – ಕೋವಿಡ್ ಮುಕ್ತ ಸಮಾಜ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಾಷ್ಟ್ರೀಯ ಯುವಪ್ರಶಸ್ತಿ ಪುರಸ್ಕೃತೆ ಬಿ.ಎಸ್.ಅನುಪಮಾ, ತಬ್ರೈಸ್‌ಖಾನ್ ಮತ್ತಿತರರಿದ್ದರು.**



### ಕವನ

## ವೃಕ್ಷ ಮಾತೆ

ವೃಕ್ಷಮಾತೆ ತಿಮ್ಮಕ್ಕ
ನಿನ್ನ ಸಾಧನೆ ಬರಿ ಮಾತಲ್ಲ ದಿವ್ಯ ಕಾಯಕ,
ನೂರಾರು ಸಸಿಗಳನ್ನು ಬೆಳೆಸಿದೆ,
ದೂರದಿಂದ ನೀರು ತಂದು ಉಣಿಸಿದೆ,
ಮಗುವಿನ ಹಾಗೆ ಗಿಡಗಳನ್ನು ಬೆಳೆಸಿದೆ,
ತನಗಿರುವ ನೋವನ್ನು ಕಾಯಕದಲ್ಲಿ ಮರೆತೆ.

ನೀ ಬೆಳೆಸಿದ ಮರಗಳಲ್ಲಿ
ಕಟ್ಟಿವೆ ಹಕ್ಕಿಗೂಡು,
ಆ ಮರದಲ್ಲಿ ಜೋಕಾಲಿ
ಹಾಡುತ್ತಿರುವ ಮಕ್ಕಳು,
ದೂರದಿಂದ ದಣಿದು
ಬಂದವರಿಗೆ ನೀಡುತ್ತಿವೆ ನೆರಳು,
ಎಲ್ಲರಿಗೂ ನೀಡುತ್ತಿವೆ
ಉಸಿರಾಡಲು ಶುದ್ಧ ಆಮ್ಲಜನಕವು,
ಈ ನಿನ್ನ ದಿವ್ಯ ಕಾಯಕವೂ ಮರೆಸಿದೆ
ಮಕ್ಕಳಿಲ್ಲ ಎಂಬ ನೋವು,



ನಿನ್ನ ಹಸ್ತ ಸ್ಪರ್ಶದಿಂದ
ಬೆಳೆಸಿದ ಮರಗಳು,
ಭವಿಷ್ಯಕ್ಕೆ ನೀಡುತ್ತಿದೆ
ಹಸಿರು ಬಾಳಲು ಉಸಿರು,
ನಿನ್ನ ಕಾಯಕವು ಆಗಿರುವುದು
ಕೋಟಿ ಕೋಟಿ ಜನರ ಭರವಸೆ,
ನಿನ್ನ ಕಾಯಕವ ಹಿಂಬಾಲಿಸುತ್ತಿರುವೆ
ಕಣ್ಣ ಮುಂದಿನ ಎಳೆಯರು,
ನೀ ಮಾಡಿರುವ ಸಾಧನೆಯನ್ನು
ಮಾಡಬೇಕು ಈಗಿನ ಯುವ ಪೀಳಿಗೆ,
ಸುತ್ತ ಗಾಳಿಗಾಗಿ ಬೆಳೆಸಬೇಕು
ನಿನ್ನ ಹಾಗೆ ಗಿಡಗಳನ್ನು,
ಆಗ ಮಾತ್ರ ಉಳಿಯುವುದು ಈ ಧರೆ.

ಪ್ರತಿ ಹಳ್ಳಿ ಗ್ರಾಮ ಪಟ್ಟಣ ಆಗಬೇಕು ವನ,
ಆಗ ಉಳಿಯುವರು ಈ ವಿಶ್ವದ ಜನ,
ನೀ ಕಂಡ ಕನಸು-ನನಸಾಗುವುದು ಒಂದು ದಿನ.



**- ಮೊಹಮ್ಮದ್ ಅಜರುದ್ದೀನ್**
ಯುವ ಸಾಹಿತಿ, ಅಕ್ಕಿಹೆಬ್ಬಾಳು ಗ್ರಾಮ
ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ -571605

## ವಿಶ್ವ ಚೇತನ ತಾಯಿ ಶಿರಬಾಗಿ ನಮಿಸುವೆವು ನಾವು

ಜನ್ಮ ಜನ್ಮಗಳ ಜನ್ಮದಾತೆಯೂ ನೀನು
ಜಗನ್ಮಾತೆಯು ನೀನು
ಮೂರು ಲೋಕದ ಮುಕ್ಕೋಟಿ ದೇವತೆಗಳ
ತಾಯಿಯೂ ನೀನು
ಆನಂದದ ಅನುಭುತಿಯು ನೀನು
ಅನುರಕ್ತೆಯು ನೀನು
ಅದಿತಿ ನೀನು ಅನವರತ ಪೂಜಿತೆ
ಭಾಗ್ಯದೇವತೆಯು ನೀನು
ಶ್ರದ್ಧೆ ವಿಶ್ವಾಸ ಮಮತೆಗಳ ಸಮಾದರ್ಪಣ
ಭಾವವೇ ನೀನು
ಶಕ್ತಿ ಶೀಲ ಸೌಂದರ್ಯಗಳ ಸಂಗಮ
ಮಾತೇ ನೀನಲ್ಲವೇನು
ಸೃಷ್ಟಿ ನೀನು ಪ್ರಕೃತಿ ನೀನು ಕಣ್ಣಿಗೆ
ಕಾಣುವ ದೇವಿಯು ನೀನು
ಧರೆಗಿಳಿದ ಅವತಾರಿಯು ನೀನು
ಕರುಣೆಯ ತ್ಯಾಗಮಯಿ ನೀನು
ಸ್ನೇಹ, ಪ್ರೀತಿ, ಪ್ರೇಮ, ವಾತ್ಸಲ್ಯಗಳ ನಿಧಿಯು
ನೀನು ಬಹುರೂಪಿಯು ನೀನು
ಕಲ್ಪತರು ಕರ್ಮಯೋಗಿ ಯಶಸ್ವಿನಿ
ಮಾತೆಯ ಮೂರುತಿಯು ನೀನು
ನೂರು ದೇವತೆಗಳಿಗೆ ಸಮ ನೀನು
ಸೇವೆಯೇ ನಿನ್ನಯ ಬದುಕು ಜಗತ್ತಿಗೆ
ಪ್ರೇರಣಾಶಕ್ತಿಯು ಹೌದಲ್ಲವೇನು
ಮಂಗಳೆ ನೀನು ನೀನು ಸರ್ವಮಂಗಳೆಯು
ಶ್ರೀ ಶಕ್ತಿಯು ನೀನು ನಿಜವಲ್ಲವೇನು
ವಿಶ್ವ ಚೇತನ ನೀನು ಶಿರಬಾಗಿ ನಮಿಸುವೆವು ನಾವು
ತಾಯೆ ಹರಸು ನೀನು
ಜ್ಞಾನ ವಿಜ್ಞಾನ ಸುಜ್ಞಾನ ಸಂಪನ್ನೇ ನೀನು
ಮೊದಲ ಗುರುವು ನೀನು
ಅಮೃತ ನೀಡುವ ಅದ್ಭುತ ಶಕ್ತಿ ನೀನು
ದಿವ್ಯ ಜ್ಯೋತಿಯು ನೀನು
ಮಹಾ ಸಾಧ್ವಿ ನೀನು ತಪಸ್ವಿಯೂ ನೀನು
ಪಾವನ ಗಂಗೆಯು ನೀನು
ಸಮನ್ವಯವಾಗುವುವು ಸರ್ವ ಧರ್ಮಗಳು
ತಾಯಿ ಒಲಿದರೆ ನೀನು
ಸಹನೆ ತಾಳ್ಮೆ ಮೌನ ನೀನು
ನಮ್ಮ ತಾಯಿಯಲ್ಲವೇನು
ಸಾಲದು ನಾಲಿಗೆ ಸಾಲದು ಲೇಖನಿ
ನಿನ್ನ ಮನ ತುಂಬಿ ವರ್ಣಿಸಲು.



**- ಷೌಕತ್ ಅಲಿ**
ಹಿರಿಯ ಕವಿ, ಮದ್ದೂರು

### ಕೋವಿಡ್-19: ವಯಸ್ಕರಿಗೆ ಸಾಮೂಹಿಕ ಲಸಿಕೆ ಅಭಿಯಾನಕ್ಕೆ

# ಬೆಂಗಳೂರಿನಲ್ಲಿ ಸಿಎಂ ಬಿಎಸ್‌ವೈ ಚಾಲನೆ

ಬೆಂಗಳೂರು: ಮುಖ್ಯ ಮಂತ್ರಿ ಬಿ.ಎಸ್. ಯಡಿ ಯೂರಪ್ಪನವರು ಸೋಮವಾರ ನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ ಯಲ್ಲಿ 'ಕೋವಿಡ್ ಲಸಿಕಾ ಮಹಾ ಅಭಿಯಾನ'ಕ್ಕೆ ಚಾಲನೆ ನೀಡಿದ್ದಾರೆ.

ನಂತರ ಮಾತನಾಡಿದ ಅವರು, ಆದಷ್ಟು ಬೇಗ ಈ ಕೊರೋನಾ ಸೋಂಕು ಮುಕ್ತವಾಗಿ ಜನರು ನೆಮ್ಮದಿಯಿಂದ ಗೌರವದಿಂದ ಸ್ವಾಭಿಮಾನದಿಂದ ಬದುಕಲಿ ಎಂದು ಆಶಿಸುತ್ತೇನೆ, ನಮ್ಮ ನಿರೀಕ್ಷೆ ಮೀರಿ ಈ ಕೋವಿಡ್ ಸೋಂಕಿನ ಪ್ರಕರಣ ಕಡಿಮೆಯಾಗಿರುವುದರಿಂದ ಇವತ್ತು ಲಾಕ್‌ಡೌನ್ ತೆಗೆದು ಎಲ್ಲರಿಗೂ ಅನುಕೂಲವಾಗುವ ರೀತಿ ಮಾಡಿದ್ದೇವೆ.



> ಜನರ ಆರೋಗ್ಯ ಹಿತದೃಷ್ಟಿಯಿಂದ ನಿಯಮ ಮಾಡುತ್ತಿದ್ದೇವೆಯೇ ಹೊರತು ಜನರಿಗೆ ಕಷ್ಟವಾಗಲಿ ಎಂದು ಅಲ್ಲ.
> – ಸಿಎಂ ಯಡಿಯೂರಪ್ಪ

ಆದರೆ ಕೊರೋನಾ ಭಯ ಇದ್ದೇ ಇದೆ. ಆದಷ್ಟು ಕೊರೋನಾ ನಿಯಮ ಪಾಲಿಸಿ, ಬಸ್ಸಿಗೆ ಜನ ಹತ್ತುವುದನ್ನು ಇವತ್ತು ನೋಡುತ್ತಿದ್ದೆ, ಜನ ನೂಕುನುಗ್ಗಲು ಮಾಡುತ್ತಿದ್ದಾರೆ. ಬಸ್ಸಿನಲ್ಲಿ ನೂಕುನುಗ್ಗಲು ಆಗುತ್ತಿದೆ. ಜನರ ಆರೋಗ್ಯ ಹಿತದೃಷ್ಟಿಯಿಂದ ನಿಯಮ ಮಾಡುತ್ತಿದ್ದೇವೆಯೇ ಹೊರತು ಜನರಿಗೆ ಕಷ್ಟವಾಗಲಿ ಎಂದು ಅಲ್ಲ, ಇದಕ್ಕೆ ನಾಡಿನ ಜನತೆ ಸಹಕಾರ ನೀಡಬೇಕು ಎಂದು ಮನವಿ ಮಾಡಿಕೊಂಡರು.

## ಲಸಿಕಾ ಉತ್ಸವಕ್ಕೆ ಶಾಸಕ ಡಾ.ಕೆ. ಅನ್ನದಾನಿ ಚಾಲನೆ

ಹಲಗೂರು: ಪ್ರಾಥಮಿಕ ಕೇಂದ್ರದ ಆವರಣದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಲಾಗಿದ್ದ ಲಸಿಕಾ ಉತ್ಸವಕ್ಕೆ ಶಾಸಕ ಡಾ.ಕೆ. ಅನ್ನದಾನಿ ಸೋಮವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಇದೊಂದು ಸಾಂಕ್ರಾಮಿಕ ಖಾಯಿಲೆ ಆಗಿದ್ದು, ದೇಶ ಕೊವಿಡ್ ಮುಕ್ತ ಆಗಬೇಕೆಂಬುದು ನಮ್ಮ ದ್ಯೇಯವಾಗಿದೆ. ಈ ನಿಟ್ಟಿನಲ್ಲಿ ಉಚಿತವಾಗಿ ಲಸಿಕೆ ನೀಡಲಾಗುತ್ತಿದ್ದು ಸದುಪಯೋಗ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು.

ಎರಡನೇ ಅಲೆಯಲ್ಲಿ ತಾಲೋಕಿನಲ್ಲಿ ಸೋಂಕಿತರ ಸಂಖ್ಯೆ ಕಡಿಮೆಯಾಗಲು ಶ್ರಮಿಸಿದ ಕಂದಾಯ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ಆಡಳಿತ ಮತ್ತು ಸಾರ್ವಜನಿಕರಿಗೆ ಅಭಿನಂದನೆ ತಿಳಿಸಿದರು.

ಈ ಸಂದರ್ಭದಲ್ಲಿ ಉಪ ವಿಭಾಗಾಧಿಕಾರಿ ಐಶ್ವರ್ಯ, ತಹಸೀಲ್ದಾರ್ ಎಂ.ವಿಜಿಯಣ್ಣ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಧನಂಜಯ, ತಾಲೋಕು ಆರೋಗ್ಯಾಧಿಕಾರಿ ಪಿ.ವೀರಭದ್ರಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಗಳಮ್ಮ, ಸದಸ್ಯರುಮತ್ತು ಆಸ್ಪತ್ರೆಯ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತೆಯರು ಸೇರಿದಂತೆ ಹಲವರು ಇದ್ದರು.



## ಲಾಕ್‌ಡೌನ್ ಮುಂದುವರಿಕೆ : ಬಸ್ ಸಂಚಾರ ಆರಂಭ



ಚಾಮರಾಜನಗರ : ಜಿಲ್ಲೆಯಲ್ಲಿ ಕೋವಿಡ್ ಪಾಸಿಟಿವಿಟಿ ಕಡಿಮೆಯಾಗದಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆದೇಶದಂತೆ ಇಂದಿನಿಂದ ಜುಲೈ 5 ರವರೆಗೆ ಲಾಕ್‌ಡೌನ್ ಯಥಾಸ್ಥಿತಿ ಮುಂದುವರೆಸಲಾಗಿದೆ.

ಕೆಲವು ನಿಬಂಧನೆ ಗಳೊಂದಿಗೆ ದಿನಸಿ ಅಂಗಡಿ ಸೇರಿದಂತೆ ಕೆಲವು ಅಗತ್ಯ ಸೇವೆಗಳಿಗೆ ಈ ಹಿಂದೆ ಇದ್ದ ಬೆಳಿಗ್ಗೆ 6 ರಿಂದ 10 ರವರೆಗಿನ ನಿಬಂಧನೆಯನ್ನು ಈಗ ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ರವರೆಗೂ ಅವಕಾಶ ಕಲ್ಪಿಸಲಾಗಿದೆ.

ಸರ್ಕಾರದ ಅನ್‌ಲಾಕ್ ಒಂದರ ಮಾರ್ಗಸೂಚಿಯು ಇಂದಿನಿಂದ ಜಾರಿಗೆ ಬರಲಿದೆ ಎಂದು ಚಾಮರಾಜನಗರ ಜಿಲ್ಲಾಧಿಕಾರಿ ಡಾ|| ಎಂ.ಆರ್. ರವಿ ಅದೇಶ ಹೊರಡಿಸಿದ್ದಾರೆ. ಅದರಂತೆ, ದಿನಸಿ, ಮಾಂಸದಂಗಡಿ, ಬೀದಿಬದಿ ವ್ಯಾಪಾರ ಬೆಳಗ್ಗೆ 6 ರಿಂದ ಮಧ್ಯಾಹ್ನ 2 ರವರೆಗೆ ತೆರೆಯಲು ಅವಕಾಶವಿದ್ದು, ಮದ್ಯದಂಗಡಿಯ ಸಮಯವೂ ವಿಸ್ತರಣೆಯಾಗಿದೆ. ಜೊತೆಗೆ, ರಾತ್ರಿ ಕರ್ಫ್ಯೂ ಹಾಗೂ ವಾರಾಂತ್ಯದ ಕರ್ಫ್ಯೂ ಇರಲಿದೆ.

ಯಥಾಪ್ರಕಾರ ವಾರದ ಮೊದಲ ಮೂರುದಿನಗಳ ಕಾಲ ಅಗತ್ಯ ಸೇವೆಗಳಿಗೆ ಅವಕಾಶ ನೀಡಲಾಗಿದ್ದು, ಇನ್ನುಳಿದ ನಾಲ್ಕು ದಿನಗಳ ಲಾಕ್‌ಡೌನ್ ಮುಂದುವರೆಯಲಿದೆ. ಹಾಗೆಯೇ, ಕೊರೊನಾ ಕೇಸ್ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಇಂದಿನಿಂದ ಅನ್‌ಲಾಕ್ 1.0 ಜಾರಿಯಾಗುತ್ತಿದ್ದು, ಎರಡು ತಿಂಗಳ ಬಳಿಕ ಕೆ.ಎಸ್.ಆರ್.ಟಿ. ಬಸ್‌ಗಳು ಕಾರ್ಯಾಚರಣೆ ಪ್ರಾರಂಭಿಸಿವೆ.

ಈ ಕುರಿತು, ಕೆ.ಎಸ್.ಆರ್.ಟಿ.ಸಿ. ಚಾಮರಾಜನಗರ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಮಾಹಿತಿ ನೀಡಿದ್ದು, ಜಿಲ್ಲೆಯ ಹೋಬಳಿ ಹಾಗೂ ತಾಲೂಕು ಕೇಂದ್ರಗಳಿ ಗಷ್ಟೆ ಬಸ್ ಸಂಚಾರ ಮಾಡಲಿದ್ದು ಗ್ರಾಮಾಂತರ ವಿಭಾಗಕ್ಕೆ ಬಸ್ ಸೇವೆ ಇರುವುದಿಲ್ಲ. ಇದರೊಟ್ಟಿಗೆ, ಚಾಮರಾಜನಗರದಿಂದ ಬೆಂಗಳೂರಿಗೆ ಮಾತ್ರ ನಮ್ಮ ವಿಭಾಗದಿಂದ ಬಸ್ ಹೊರಡಲಿದ್ದು, ಮೈಸೂರಿಗೆ ಸದ್ಯಕ್ಕೆ ಟ್ರಿಪ್ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬೆಂಗಳೂರಿಗೆ ಗಂಟೆಗೆ ಒಂದರಂತೆ ಬಸ್ ಸೇವೆ ನೀಡಬೇಕೆಂದುಕೊಂಡಿದ್ದು, ಬೇಡಿಕೆಗನುಣವಾಗಿ ಸೇವೆ ಇರಲಿದೆ. ಜಿಲ್ಲೆಯ ಒಳಗಡೆ 50 ಬಸ್ ಓಡಿಸಲು ತೀರ್ಮಾನಿಸಲಾಗಿದೆ. ಒಟ್ಟು 1800 ಸಂಸ್ಥೆಯ ಸಿಬ್ಬಂದಿ ಲಸಿಕೆಯ ಮೊದಲ ಡೋಸ್ ಪಡೆದಿದ್ದು, 140 ಮಂದಿ ಎರಡೂ ಡೋಸ್ ಪಡೆದಿದ್ದಾರೆ. ಚಾಲಕರು, ನಿರ್ವಾಹಕರ ಕೊರತೆ ಎದುರಾದರೆ ಮೊದಲ ಡೋಸ್ ಪಡೆದಿರುವ 45 ವರ್ಷದೊಳಗಿನವರನ್ನು ಬಳಸಿಕೊಳ್ಳಲಾಗುವುದು. ಸೇವೆಗೂ ಮೊದಲು, ಆರ್.ಟಿ.ಪಿ.ಸಿ.ಆರ್. ನೆಗೆಟಿವ್ ವರದಿ ಕಡ್ಡಾಯವಾಗಿರಲಿದೆ ಎಂದರು.

## ಆಶಾ, ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಆಟೋಚಾಲಕರಿಗೆ ಫುಡ್ ಕಿಟ್ ವಿತರಣೆ

ಕೆ.ಆರ್.ಪೇಟೆ: ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಆಟೋಚಾಲಕರಿಗೆ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರಾದ ಹೆಚ್. ಟಿ. ಮಂಜುರವರು ಆಹಾರದ ಕಿಟ್‌ಗಳನ್ನು ವಿತರಿಸಿದರು.

ನಂತರ ಮಾತನಾಡಿದ ಹೆಚ್. ಟಿ. ಮಂಜುರವರು ಆಟೋ ಚಾಲಕರು ಲಾಕ್ಡೌನ್ ಆದ ಸಂದರ್ಭದಿಂದಲೂ ಆಟೋ ಓಡಿಸಲು ಸಾಧ್ಯವಾಗದೇ ಯಾವುದೇ ಆದಾಯವಿಲ್ಲದೆ ಮನೆಯಲ್ಲಿ ಕುಳಿತಿದ್ದಾರೆ. ಯಾವುದೇ ವಾಹನಗಳು ರಸ್ತೆಯಲ್ಲಿ ಸಂಚರಿಸುತ್ತಿದ್ದ ಹಾಗೆಯೇ ಯಾವುದೇ ಪ್ರಯಾಣಿಕರು ಸಂಚರಿಸದೇ ಇತರ ಆಟೋ ಚಾಲಕರಿಗೆ ತುಂಬಾ ತೊಂದರೆಯಾಗುತ್ತಿದೆ. ಯಾವುದೇ ಪ್ರಯಾಣಿಕರು ಸಂಚರಿಸಿದೆ ಆಟೋ ಚಾಲಕರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ಹಿನ್ನಲೆಯಲ್ಲಿ ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿ ರವರ ಆಶೀರ್ವಾದದೊಂದಿಗೆ ನಾವು ತಾಲೂಕಿನ ಆಟೋ ಚಾಲಕರು ಮತ್ತು ಆಶಾ ಕಾರ್ಯಕರ್ತರಿಗೆ ಫುಡ್ ಕಿಡ್ ವಿತರಿಸುವ ಮೂಲಕ ನಮ್ಮ ಸಮಾಜ ಸೇವೆಯನ್ನು ಮಾಡುತ್ತಿದ್ದೇವೆ ಎಂದು ಹೇಳಿದರು.

ನಂತರ ಮಾತನಾಡಿದ ಗ್ರಾಮ ಪಂಚಾಯಿತಿ ಸದಸ್ಯರಾದ ಅತೀಕ್ ಮಂಜಣ್ಣನವರಿಗೆ ಸಮಾಜ ಸೇವೆ ಮಾಡುತ್ತಾ ಮುಂದಿನ ಶಾಸಕರಾಗಲಿ ಎಂದು ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ 150ಕ್ಕೂ ಹೆಚ್ಚಿನ ಆಟೋ ಚಾಲಕರಿಗೆ ಹಾಗೂ ಕೋವಿಡ್ ಸಂದರ್ಭದಲ್ಲಿ ತಮ್ಮ ನಿಷ್ಠಾವಂತ ಕಾರ್ಯವನ್ನು ಪ್ರದರ್ಶಿಸುತ್ತಿರುವ ಆಶಾ ಕಾರ್ಯಕರ್ತರಿಗೆ ಫುಟ್ ಕಿಟ್ ಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಮನ್ ಮುಲ್ ನಿರ್ದೇಶಕರಾದ ಎಚ್ ಟಿ ಮಂಜು, ಜೆಡಿಎಸ್ ಮುಖಂಡರಾದ ಕೋಟಿ ಸುಬ್ಬೇಗೌಡರು, ಗ್ರಾಮ ಪಂಚಾಯಿತಿ ಸದಸ್ಯರಾದ ಅತೀಕ್, ಮಾಜಿ ಸದಸ್ಯರಾದ ಕಾಳನಾಯಕ್, ನಯಾಜ್ ಪಾಷ, ಪ್ರದೀಪ್, ಸೋಮಶೇಖರ್ ಸೇರಿದಂತೆ 150ಕ್ಕೂ ಹೆಚ್ಚಿನ ಆಟೋ ಚಾಲಕರು ಹಾಜರಿದ್ದರು.



## ಸಿಬ್ಬಂದಿಗಳ ಕಾರ್ಯ ಶ್ಲಾಘನೀಯ: ಡಿ.ವಿನ್ಸೆಂಟ್



ಮಂಡ್ಯ : ಟ್ರಾಫಿಕ್ ವಾರ್ಡನ್ ಮತ್ತು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಗರದ ಹೊರ ವಲಯದಲ್ಲಿರುವ ಕೋವಿಡ್ ಕೇರ್ ಸೆಂಟರ್‌ನಲ್ಲಿ ಡಿ. ವಿನ್ಸೆಂಟ್ ಆಹಾರ ಕಿಟ್ ವಿತರಿಸಿದರು.

ನಂತರ ಮಾತನಾಡಿದ ಅವರು, ಕೋವಿಡ್ ಕೇರ್ ಸೆಂಟರ್‌ನಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಕಾರ್ಯ ಶ್ಲಾಘನೀಯ. ವೈದ್ಯರು, ದಾದಿಯರಂತೆ ರೋಗಿಗಳನ್ನು ಬಹಳ ಹತ್ತಿರದಿಂದ ಕೆಲಸ ಮಾಡುವ ಕೇಂದ್ರಗಳೆಂದರೆ ಅದು ಕೋವಿಡ್ ಕೇರ್ ಸೆಂಟರ್‌ಗಳು ಮಾತ್ರ. ಅದರಲ್ಲಿ ಕೆಲಸ ಮಾಡುವ ಸಿಬ್ಬಂದಿಗಳೂ ಸಹ ತಮ್ಮ ಪ್ರಾಣದ ಹಂಗು ತೊರೆದು ಕೆಲಸ ಮಾಡುತ್ತಾರೆ. ಈ ಹಿನ್ನಲೆಯಲ್ಲಿ ಅವರಿಗೂ ಆಹಾರ ಕಿಟ್‌ಗಳನ್ನು ಕೊಡಬೇಕು ಎಂಬ ಹಿನ್ನಲೆಯಲ್ಲಿ ನಾವು ನೀಡುತ್ತಿದ್ದೇವೆ ಎಂದರು. ಡಿವೈಎಸ್ಪಿ ಮಂಜುನಾಥ್, ರೆಡ್‌ಕ್ರಾಸ್‌ನ ಜಂಟಿ ಕಾರ್ಯದರ್ಶಿ ರಂಗಸ್ವಾಮಿ, ಟ್ರಾಫಿಕ್ ವಾರ್ಡನ್‌ಗಳಾದ ಶಾಂತರಾಜು, ದೈಹಿಕ ಶಿಕ್ಷಕ ಜ್ಞಾನಪೂರ್ಣ, ಗೋಪಾಲ್, ಶಾಂತಿಬಾಬು ಇತರರಿದ್ದರು.

ಕ್ರಾಂತಿಯಕಿಡಿ
ಕಾಯಕಯೋಗಿ
KAYAKAYOGI-MORNING DAILY
ಕನ್ನಡ ದಿನಪತ್ರಿಕೆ
ಮಂಗಳವಾರ
22 ಜೂನ್ 2021

## ರೋಹಿಣಿಗೆ ಸಂಕಷ್ಟ: ಅಧಿಕೃತ ನಿವಾಸದ ನವೀಕರಣ ಪ್ರಕರಣ ತನಿಖೆಗೆ ಆದೇಶ



ಮೈಸೂರು: ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಯವರು ಪಾರಂಪರಿಕ ಕಟ್ಟಡ ಸಂರಕ್ಷಣಾ ಸಮಿತಿಯಿಂದ ಅನುಮತಿ ಪಡೆಯದೆ ತಮ್ಮ ಅಧಿಕೃತ ನಿವಾಸವನ್ನು ನವೀಕರಣ ಮಾಡಿದ್ದರಿಂದ ಅವರ ವಿರುದ್ಧ ತನಿಖೆ ನಡೆಸಿ ವರದಿ ಸಲ್ಲಿಸು ವಂತೆ ಕಂದಾಯ ಇಲಾಖೆಯು ಪ್ರಾದೇಶಿಕ ಆಯುಕ್ತರಿಗೆ ನಿರ್ದೇ ಶನ ಮಾಡಿದೆ. ಏಳು ದಿನಗಳಲ್ಲಿ ವರದಿ ನೀಡುವಂತೆ ನಿರ್ದೇಶಿಸಿದೆ.

ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿಯವರು ಪಾರಂಪರಿಕ ಕಟ್ಟಡ ಸಂರಕ್ಷಣಾ ಸಮಿತಿಯ ಅನುಮತಿ ಪಡೆಯದೇ ನಿವಾಸದ ನೆಲ ಹಾಸು ನವೀಕರಣಕ್ಕೆ 16.50 ಲಕ್ಷ ಖರ್ಚು ಮಾಡಿದ್ದಾರೆ ಎಂದು ಶಾಸಕ ಸಾರಾ ಮಹೇಶ್ ದೂರು ನೀಡಿದ್ದರು.ಈ ದೂರನ್ನು ಆಧರಿಸಿ ತನಿಖೆಗೆ ಆದೇಸಿಸಲಾಗಿದೆ.

## ರೈತಬಣಕ್ಕೆ ಹೆಮ್ಮಿಗೆ ಚಂದ್ರಶೇಖರ್ ರಾಜೀನಾಮೆ



ಮಂಡ್ಯ: ಕರ್ನಾಟಕ ರಾಜ್ಯ ರೈತಸಂಘ(ರೈತಬಣ)ದ ಗೌರವಾಧ್ಯಕ್ಷ ಸ್ಥಾನಕ್ಕೆ ಹೆಮ್ಮಿಗೆ ಚಂದ್ರಶೇಖರ್ ರಾಜೀನಾಮೆ ನೀಡಿರುವುದಾಗಿ ತಿಳಿಸಿದ್ದಾರೆ.

ಅಗತ್ಯವಸ್ತುಗಳ ಬೆಲೆ ಏರಿಕೆ, ಕೃಷಿ ತಿದ್ದುಪಡಿ ಕಾಯ್ದೆ ಜಾರಿ, ಮೈಶುಗರ್ ಕಾರ್ಖಾನೆ ಆರಂಭಿಸದ ನಿರ್ಲಕ್ಷ್ಯ, ಮನ್‌ಮುಲ್‌ನಲ್ಲಿ ನಡೆದಿರುವ ಅವ್ಯವಹಾರ, ರೈತರ ಬೆಳೆಗಳಿಗೆ ಸಿಗದ ವೈಜ್ಞಾನಿಕ ಬೆಲೆ ಇವೆಲ್ಲವುಗಳು ರೈತರನ್ನು ಸಂಕಷ್ಟಕ್ಕೆ ದೂಡಿವೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ರೈತ ಹೋರಾಟಗಾರರ ಮೇಲೆ ಬಹಳ ಹೊಣೆಗಾರಿಕೆ ಇದೆ. ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ರೈತ ಸಂಘಟನೆಗಳು ಪರಿಣಾಮಕಾರಿ ಹೋರಾಟದ ಮೂಲಕ ಅನ್ನದಾತರ ರಕ್ಷಣೆಯತ್ತ ಶ್ರಮಿಸಬೇಕಾದುದು ಇಂದಿನ ಅಗತ್ಯ. ಹೀಗಿರುವಾಗ ಕೆಲವು ಕಾರಣಗಳಿಂದಾಗಿ ಕರ್ನಾಟಕ ರಾಜ್ಯ ರೈತಸಂಘ (ರೈತಬಣ)ದ ಗೌರವಾಧ್ಯಕ್ಷನಾಗಿ ಮುಂದುವರೆಯಲು ಇಚ್ಛಿಸುವುದಿಲ್ಲ. ಹಾಗಾಗಿ ಬಣದ ರಾಜ್ಯಾಧ್ಯಕ್ಷ ಇ.ಎನ್.ಕೃಷ್ಣ ಅವರಿಗೆ ನನ್ನ ರಾಜೀನಾಮೆ ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ.

# ಸಚಿವೆ ಶಶಿಕಲಾ ಜೊಲ್ಲೆ ನೇತೃತ್ವದಲ್ಲಿ ನಡೆದ 'ಕೋವಿಡ್ 3ನೇ ಅಲೆ ತಡೆ' ಕುರಿತ ಸಭೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಮೂರನೇ ಅಲೆ ಎದುರಿಸಲು ಪ್ರತಿ ತಾಲೂಕಿನಲ್ಲಿಯೂ ಮಕ್ಕಳಿಗಾಗಿ ಪ್ರತ್ಯೇಕ ಕೊವಿಡ್ ಕೇರ್ ಸೆಂಟರ್ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಹೇಳಿದ್ದಾರೆ.

ಸೋಮವಾರ ವಿಕಾಸಸೌಧದಲ್ಲಿ ಕೊವಿಡ್ 3 ಅಲೆ ನಿಯಂತ್ರಣ ಕುರಿತು ಬೆಂಗಳೂರು ನಗರ ಜಿಲ್ಲೆ ಹಾಗೂ ಬಿಬಿಎಂಪಿ ವ್ಯಾಪ್ತಿಯ ಜನ ಪ್ರತಿನಿಧಿಗಳು ಅಧಿಕಾರಿಗಳ ಸಭೆ ನಡೆಸಿ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಎರಡನೆ ಅಲೆಯಲ್ಲಿ ಸುಮಾರು 50 ಮಕ್ಕಳು ತಂದೆ ತಾಯಿಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಬಾಲ ಸೇವಾ ಯೋಜನೆಯ ಮೂಲಕ ಪ್ರತಿ ತಿಂಗಳು ಮಗುವಿಗೆ 3500 ರೂ. ನೀಡುವುದು, ಅಲ್ಲದೆ ಉಚಿತ ಶಿಕ್ಷಣ ನೀಡುವುದು, 21 ವರ್ಷ ತುಂಬಿದ ಹೆಣ್ಣು ಮಕ್ಕಳಿಗೆ 1 ಲಕ್ಷ ರೂ. ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ತಂದೆ ತಾಯಿಗಳನ್ನು ಮಕ್ಕಳನ್ನು ನೋಡಿಕೊಳ್ಳಲು ಸಂಬಂಧಿಗಳು ಶಕ್ತರಿಲ್ಲದಿದ್ದರೆ ಇಲಾಖೆ ಮೂಲಕ ದತ್ತು ಸ್ವೀಕಾರ ಕ್ರಮ ಕೈಗೊಳ್ಳಲಾಗುವುದು. ಯಾರಾದರೂ ದಾನಿಗಳು ಅವರ ಜೀವನಕ್ಕೆ ಉಜ್ವಲ ಭವಿಷ್ಯ ರೂಪಿಸಲು ಮುಂದೆ ಬಂದರೆ ಅಂತ ಮಕ್ಕಳ ಭವಿಷ್ಯ ರೂಪಿಸಲು ಇಲಾಖೆ ಕೊಂಡಿಯಾಗಿ ಕೆಲಸ ಮಾಡಲಿದೆ. ಮೂರನೆ ಅಲೆ ನಿಯಂತ್ರಿಸಲು ಮಹಿಳಾ ಮತ್ತು ಮಕ್ಕಳ ಇಲಾಖೆ, ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ಪೊಲೀಸ್ ಇಲಾಖೆ ಮಕ್ಕಳನ್ನು ಗುರುತಿಸುವ ಕೆಲಸವನ್ನು ಮಾಡಲಾಗುತ್ತಿದೆ. ಮಕ್ಕಳಿಗೆ ಸೋಂಕು ದೃಢ ಪಟ್ಟರೆ ಕೊವಿಡ್ ಕೇರ್ ಸೆಂಟರ್ ಗೆ ಮಗುವಿನೊಂದಿಗೆ ತಾಯಿಯೂ ಇರಲು ಅವಕಾಶ ಮಾಡಲಾಗಿದೆ. ಯುವತಿಯರಿಗೆ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗುವುದು. ಅಂಗವಿಕಲರಿಗೂ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.



ಬೆಂಗಳೂರಲ್ಲಿ ಪ್ರತ್ಯೇಕ ಮಕ್ಕಳ ಕೊವಿಡ್ ಆಸ್ಪತ್ರೆಗೆ ಚಿಂತನೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಸಾಕಷ್ಟು ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಅದರ ಹೊರತಾಗಿ ಮಕ್ಕಳಿಗಾಗಿಯೇ ಪ್ರತ್ಯೇಕ ಕೊವಿಡ್ ಆಸ್ಪತ್ರೆ ತೆರೆಯಲು ಸಲಹೆ ಬಂದಿದೆ. ಈ ಕುರಿತು ಮುಖ್ಯಮಂತ್ರಿ ಯಡಿಯೂರಪ್ಪ ಅವರ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು.

ಈಗಾಗಲೇ ಬಿಬಿಎಂಪಿ ವ್ಯಾಪ್ತಿಯಲ್ಲಿ 1419 ಬೆಡ್ ಗಳನ್ನು ಗುರುತಿಸಲಾಗಿದೆ. 141 ವೆಂಟಿಲೇಟರ್ ಉಳ್ಳ ಐಸಿಯು ಬೆಡ್ ಗಳು, 116 ಐಸಿಯು ರಹಿತ ಬೆಡ್ ಗಳು, 430 ಹೆಚ್ ಡಿಯು ಬೆಡ್ ಗಳು, 712 ಸಾಮಾನ್ಯ ಬೆಡ್ ಗಳನ್ನು ವ್ಯವಸ್ಥೆ ಮಾಡಲಾಗಿದೆ. ಇನ್ನೂ ಹೆಚ್ಚಿನ ಬೆಡ್ ಬೇಡಿಕೆ ಇದೆ. ಮಕ್ಕಳಿಗೆ ಪ್ರತ್ಯೇಕವಾದ ಮಾಸ್ಕ್, ವೆಂಟಿಲೇಟರ್, ಬೆಡ್, ಔಷಧ, ಮಾತ್ರೆ ಬೇಕಾಗುತ್ತದೆ ಅದರ ಸಿದ್ದತೆಯೂ ನಡೆಯುತ್ತಿದೆ ಎಂದರು.

ಜಿಲ್ಲೆಯಲ್ಲಿ ಪ್ರತಿ ತಾಲೂಕು ಹಾಗೂ ಜಿಲ್ಲಾ ಕೇಂದ್ರದಲ್ಲಿ ಮಕ್ಕಳ ತಜ್ಞರನ್ನು ಗುರುತಿಲಾಗಿದೆ. ಕಳೆದ ಒಂದು ವರ್ಷದಲ್ಲಿ ಕೊರೊನಾ ಸೋಂಕಿನಿಂದ ಜಿಲ್ಲೆಯಲ್ಲಿ 51 ಮಕ್ಕಳು ನಿಧನ ಹೊಂದಿದ್ದಾರೆ. ರಾಜ್ಯದಲ್ಲಿ ಇದುವರೆಗೂ 0–9 ವಯಸ್ಸಿನ 67687 ಮತ್ತು 09–18 ವಯಸ್ಸಿನ 170565 ಮಕ್ಕಳು ಒಟ್ಟು 0–18 ವಯಸ್ಸಿನ 2,38,252 ಮಕ್ಕಳು ಸೋಂಕಿಗೆ ತುತ್ತಾಗಿವೆ. ಜಿಲ್ಲೆಯಲ್ಲಿ ಒಂದು ವರ್ಷದಲ್ಲಿ 2 ಮಕ್ಕಳು ತಂದೆ ತಾಯಿ ಕಳೆದುಕೊಂಡು ಅನಾಥರಾಗಿದ್ದಾರೆ. ಅವರಿಗೆ ಮುಖ್ಯಮಂತ್ರಿ ಬಾಲ ಸೇವಾ ಯೋಜನೆ ಮೂಲಕ ಸಹಾಯಧನ ನೀಡಲಾಗುವುದು ಎಂದು ಸಚಿವರು ಹೇಳಿದರು.

ರಾಜ್ಯಾದ್ಯಂತ ಅಂಗನವಾಡಿ ಕಾರ್ಯಕರ್ತೆಯರು ಮುಂಚೂಣಿ ಕಾರ್ಯಕರ್ತೆಯರಾಗಿ ಕೆಲಸ ಮಾಡುತ್ತಿದ್ದಾರೆ. ಕೊವಿಡ್ ನಿಂದ ನಿಧನ ಹೊಂದಿದರೆ ಅವರಿಗೆ 30 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ. ಬೆಂಗಳೂರು ನಗರದಲ್ಲಿ 3. ಅಗನವಾಡಿ ಕಾರ್ಯಕರ್ತೆಯರು ನಿಧನ ಹೊಂದಿದ್ದಾರೆ. ಅವರಲ್ಲಿ 2. ರಿಗೆ ಪರಿಹಾರ ನೀಡಲಾಗುತ್ತಿದೆ ಎಂದರು.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 2587 ಅಂಗನವಾಡಿ ಕೇಂದ್ರಗಳಿವೆ. 4564 ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿದ್ದಾರೆ. ಅವರಲ್ಲಿ ಶೇ 90 ರಷ್ಟು ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಕೊವಿಡ್ ಮೊದಲ ಲಸಿಕೆ ಪಡೆದಿದ್ದಾರೆ. ಶೇ 49 ರಷ್ಟು ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಎಡರನೇ ಡೋಸ್ ಲಸಿಕೆ ಪಡೆದಿದ್ದಾರೆ. ಅಂಗನವಾಡಿ ಬಂದ್ ಇರುವುದರಿಂದ ಪ್ರತಿ 15 ದಿನಕ್ಕೊಮ್ಮೆ ಮಕ್ಕಳಿಗೆ ಆಹಾರ ಒದಗಿಸುವ ಕೆಲಸ ಮಾಡಲಾಗುತ್ತಿದೆ. ಜೊತೆಗೆ ಅವರ ಆರೋಗ್ಯದ ಮಾಹಿತಿ ಪಡೆದು ಸೂಕ್ತ ಚಿಕಿತ್ಸೆ ಒದಗಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ 22871 ಗರ್ಭಿಣಿಯರು, 19131 ಬಾಣಂತಿಯರು, 97 ಕಿಶೋರಿಯರು ಇದ್ದಾರೆ. ಜಿಲ್ಲೆಯಲ್ಲಿ 124 ಮಕ್ಕಳು ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. 9761 ಮಕ್ಕಳು ಸಾಧಾರಣ ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಜಿಲ್ಲೆಯಲ್ಲಿ 39 ಪೋಕ್ಸೊ ಪ್ರಕರಣಗಳು ನಡೆದಿದ್ದು, 37 ಪ್ರಕರಣಗಳಲ್ಲಿ ಪರಿಹಾರ ಒದಗಿಸಲಾಗಿದೆ. 168 ಬಾಲ್ಯ ವಿವಾಹಗಳಾಗಿದ್ದು, 122 ಬಾಲ್ಯ ವಿವಾಹ ತಡೆಯಲಾಗಿದೆ.28 ಬಾಲ್ಯ ವಿವಾಹ ಪ್ರಕರಣಗಳಲ್ಲಿ ಎಫ್ ಐ ಆರ್ ದಾಖಲಿಸಲಾಗಿದೆ. ಈ ಬಾರಿಯ ಲಾಕ್ ಡೌನ್ ಅವಧಿ ಏಪ್ರಿಲ್ ನಿಂದ ಇಲ್ಲಿಯವರೆಗೆ 3 ಬಾಲ್ಯ ವಿವಾಹ ಪ್ರಕರಣಗಳು ಬೆಳಕಿಗೆ ಬಂದಿದ್ದು, 2 ಬಾಲ್ಯ ವಿವಾಹ ತಡೆ ಹಿಡಿಯಲಾಗಿದೆ. ಒಂದು ಪ್ರಕರಣದಲ್ಲಿ ಎಫ್ ಐ ಆರ್ ದಾಖಲಿಸಲಾಗಿದೆ. ಇನ್ನು ಹೊರಗಡೆಯಿಂದ ಬೆಂಗಳೂರಿಗೆ ವಲಸೆ ಬಂದಿರುವ 513 ಮಕ್ಕಳಿಗೆ ಆಹಾರ ವಿತರಣೆ ಮಾಡಲಾಗಿದೆ ಎಂದು ಸಚಿವರು ವಿವರಣೆ ನೀಡಿದರು.

ಇದೇ ವೇಳೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 30 ಮಕ್ಕಳ ಮೇಲೆ ಲಸಿಕೆ ಪ್ರಯೋಗ ಮಾಡಲಾಗಿದೆ. ಅದು ಯಶಸ್ವಿಯಾದರೆ ಮುಂದಿನ ತೀರ್ಮಾನ ಸಿಎಂ, ಪಿಎಂ ತೆಗೆದುಕೊಳ್ಳುತ್ತಾರೆ. ಶಾಲೆ ತೆರೆಯುವ ಬಗ್ಗೆ ಶಿಕ್ಷಣ ಸಚಿವರ ಜೊತೆ ಚರ್ಚಿಸಲಾಗುವುದು. ತಜ್ಞರ ವರದಿಯಲ್ಲಿ ಅಧಿಕೃತವಾಗಿ ಏನು ವರದಿ ನೀಡಿದ್ದಾರೆ ಎನ್ನುವುದು ನಮ್ಮ ಇಲಾಖೆಗೆ ಇನ್ನೂ ಮಾಹಿತಿ ಬಂದಿಲ್ಲ. ಸಿಎಂ ನೋಡಿ ನಮ್ಮ ಇಲಾಖೆಗೆ ಕಳುಹಿಸಿಕೊಡುತ್ತಾರೆ ಎಂದರು.

ಇನ್ನು ಮಕ್ಕಳಿಗೆ ಮೊಟ್ಟೆ ಕೊರತೆಯಾಗುತ್ತಿದೆ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಮಾರುಕಟ್ಟೆಯಲ್ಲಿ ಮೊಟ್ಟೆ ದರ ಹೆಚ್ಚಳವಾಗಿದ್ದು ಸಮಸ್ಯೆಯಾಗಿತ್ತು. ಅದನ್ನು ಗ್ರಾಮ ಪಂಚಾಯತಿಯಿಂದ ಮೊಟ್ಟೆ ವಿತರಣೆಗೆ ಸೂಚನೆ ನೀಡಲಾಗಿದೆ. ಪಂಚಾಯತಿಯಲ್ಲಿ ಹಣದ ಕೊರತೆಯ ಬಗ್ಗೆ ಯಾವುದೇ ದೂರು ಬಂದಿಲ್ಲ ಎಂದು ಹೇಳಿದರು.

### ಮ್ಯಾನ್‌ಹೋಲ್‌ಗೆ ಇಳಿಸಿ ಮಲ ಸ್ವಚ್ಛಗೊಳಿಸಿದ್ದ ಕೇಸ್
## ಇಂಜಿನಿಯರ್, ಮೇಲ್ವಿಚಾರಕರಿಗೆ ತಲಾ 50 ಸಾವಿರ ದಂಡ

ಪಾಂಡವಪುರ : ಪೌರ ಕಾರ್ಮಿಕ ಮಹಿಳೆಯನ್ನು ಮ್ಯಾನ್ ಹೋಲ್‌ಗೆ ಇಳಿಸಿ ಮಲ ಸ್ವಚ್ಛಗೊಳಿಸಿದ್ದ ಪಾಂಡವಪುರ ಸಹಕಾರ ಸಕ್ಕರೆ ಇಂಜಿನಿಯರ್ ಡಿ.ಆರ್.ನಾಗೇಶ್ ಹಾಗೂ ಮೇಲ್ವಿಚಾರಕ ರಾಜಚಾರಿ ಎಂಬುವವರಿಗೆ ತಲಾ 50 ಸಾವಿರ ರೂ. ದಂಡ ವಿಧಿಸಲಾಗಿದೆ.

ಕೆಲ ದಿನಗಳ ಹಿಂದೆ ಎಂ.ಮಂಜುಳಾ ಎಂಬುವವರು ಪಿಎಸ್‌ಎಸ್‌ಕೆ ಕಾರ್ಖಾ ನೆಯ ಅಧಿಕಾರಿಗಳ ಸೂಚನೆ ಮೇರೆಗೆ ವಿಶ್ವೇಶ್ವರಯ್ಯ ನಗರದಲ್ಲಿರುವ ಪಿಎಸ್ ಎಸ್‌ಕೆ ನೌಕರರ ವಸತಿ ಗೃಹಗಳಲ್ಲಿನ ಮ್ಯಾನ್‌ಹೋಲ್ ಸ್ವಚ್ಛಗೊಳಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ಉಪವಿಭಾಗಾ ಧಿಕಾರಿ ಬಿ.ಸಿ.ಶಿವಾನಂದಮೂರ್ತಿ ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ. ಆರೋ ಪಿಗಳ ವಿರುದ್ಧ ಪಾಂಡವ ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕಾವ್ಯಲೋಕದ ಕ್ರಾಂತಿ ಕವಿ ಡಾ.ಸಿದ್ದಲಿಂಗಯ್ಯ : ಸಾಹಿತಿ ಬನ್ನೂರು ರಾಜು

ಮೈಸೂರು: ನಾಡೋಜ ಸಿದ್ದಲಿಂಗಯ್ಯ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಅಪರೂಪದ ಕ್ರಾಂತಿಕಾರಿ ಕವಿಯಾಗಿ, ಖಡ್ಗವಾಗಲಿ ಕಾವ್ಯ ಎಂಬಂತೆ ಕನ್ನಡ ಕಾವ್ಯಕ್ಕೊಂದು ಹೊಸ ಭಾಷ್ಯ ಬರೆದವರು. ಅವರು ದಲಿತ ಕವಿ ಮಾತ್ರ ವಲ್ಲದೆ ಬಹುಜನರ ಕವಿಯಾಗಿದ್ದು ಒಟ್ಟಾರೆ ಈ ನಾಡಿನ ಹಾಗೂ ವಿಶೇಷವಾಗಿ ಬಹುಜನ ಸಮಾಜದ ಬಹು ದೊಡ್ಡ ಆಸ್ತಿ ಆಗಿದ್ದರು. ಇಂಥ ಆಸ್ತಿಯನ್ನು ನಾವು ಕಳೆದುಕೊಂಡು ಇಂದು ಅನಾಥರಾಗಿದ್ದೇವೆ. ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.



ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಮತ್ತು ಪದ್ಮಪಾಣಿ ಲಲಿತ ಕಲಾ ಅಕಾಡೆಮಿಯ ಸಂಯುಕ್ತ ಆಶ್ರಯದಲ್ಲಿ ನಗರದ ದಟ್ಟಗಳ್ಳಿಯಲ್ಲಿರುವ ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿಯ ಆವರಣದಲ್ಲಿ ಆಯೋಜಿಸಿದ್ದ ನಾಡೋಜ ಡಾ.ಸಿದ್ದಲಿಂಗಯ್ಯಅವ ರಿಗೆ ಸಲ್ಲಿಸಿದ ನುಡಿ ನಮನ ಮತ್ತು ಗೀತಗಾಯನ ಕಾರ್ಯಕ್ರಮ ದಲ್ಲಿ ಸಿದ್ದಲಿಂಗಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಮಾತನಾಡಿದ ಅವರು, ಸಮಾಜವನ್ನು ತಿದ್ದಿ ತೀಡಿ ಜಾಗೃತಿಗೊಳಿಸುವಂತೆ ತಮ್ಮ ಅತ್ಯಮೂಲ್ಯ ಬರಹ ಮತ್ತು ಭಾಷಣಗಳನ್ನು ನಾಡಿಗೆ ಕೊಡುಗೆಯಾಗಿ ಕೊಟ್ಟು ಹೋಗಿರುವ ನಾಡೋಜ ಕವಿ ಡಾ.ಸಿದ್ದಲಿಂಗಯ್ಯ ಅವರ ಋಣ ಯಾವಾಗಲೂ ಈ ಸಮಾಜದ ಮೇಲೆ ಅದರಲ್ಲೂ ಶೋಷಿತ ಬಹುಜನರ ಮೇಲೆ ತೀರದ ಋಣವಾಗಿ ಇದ್ದೇ ಇರುತ್ತದೆ. ಆದ್ದರಿಂದ ಇಂತಹ ಋಣ ಪ್ರಜ್ಞೆ ಇಟ್ಟುಕೊಂಡು ಸಿದ್ದಲಿಂಗಯ್ಯನವರ ಅಂಬೇಡ್ಕರ್ ವಾದದ ಸಮಸಮಾಜದ ಆಶಯಗಳನ್ನು ಈಡೇರಿಸುವಂಥಾ ಮಾನವ ಪರವಾದ ಮನುಷ್ಯತ್ವವುಳ್ಳ ಸಾರ್ಥಕವಾದ ಕೆಲಸಗಳನ್ನು ಮಾಡಬೇಕು ಎಂದರು.

ಸಿದ್ದಲಿಂಗಯ್ಯನವರು ದಲಿತೋದ್ಧಾರಕ ಕವಿ ಮಾತ್ರವಲ್ಲ. ತುಳಿತಕ್ಕೊಳಗಾದ ಸರ್ವರುದ್ಧಾರದ ಕವಿ ಅವರು ಬಹು ಜನರ ಬಂಧುವಾಗಿ ಶೋಷಿತರ ಎದೆಯಲ್ಲಿ ತಮ್ಮ ಕಾವ್ಯದ ಕಿಡಿಗಳನ್ನು ಸಿಡಿಸಿ ತನ್ಮೂಲಕ ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ. ಅವರು ಮೂಲತಃ ಬಂಡಾಯ ಕವಿ ಆಗಿದ್ದರೂ, ಅವರ ಎದೆಯಲ್ಲಿ ನೋವಿನ ಕೂಗು ಇದ್ದರೂ ಕೂಡ ಅವರು ನವಿರಾದ ಸುಮಧುರ ಪ್ರೇಮ ಗೀತೆಗಳನ್ನೂ ಬರೆದು ನಾಡಿಗೆ ನೀಡಿ ಮಹತ್ವಪೂರ್ಣ ಪ್ರೇಮಕವಿಯೂ ಆಗಿದ್ದರು. ಆದಿತ್ಯ ಎಂಬ ಕಾವ್ಯ ನಾಮದಿಂದ ಚಲನಚಿತ್ರಗಳಿಗೂ ಹಾಡುಗಳನ್ನು ಬರೆದು. ರಾಜ್ಯ ಪ್ರಶಸ್ತಿಗೂ ಭಾಜನರಾಗಿದ್ದರು. ಆದರೆ ಅವರ ಬಂಡಾಯ ಗೀತೆಗಳ ಬೋರ್ಗರೆತದಲ್ಲಿ ಅವರ ನವಿರಾದ ಪ್ರೇಮ ಗೀತೆಗಳು ಬಹಳಷ್ಟು ಜನರ ಕಿವಿಗೆ ಕೇಳದಯೇ ನೇಪಥ್ಯದಲ್ಲಿ ಉಳಿದು ಬಿಟ್ಟವು ಎಂದರು.

ಮಹಾರಾಜ ಕಾಲೇಜಿನ ಜಾನಪದ ವಿಭಾಗದ ಸಹ ಪ್ರಾಧ್ಯಾಪಕಿ ಲೇಖಕಿ ಡಾ.ವಿಜಯಲಕ್ಷ್ಮೀ ಮನಾಪುರ ಮಾತನಾಡಿ, ಸಿದ್ದಲಿಂಗಯ್ಯನವರ ಕವಿತೆಗಳಲ್ಲಿ ಅವರು ಅನುಭವಿಸಿದ್ದ ನೋವುಗಳೇ ಸ್ಥಾಯಿ ಭಾವವಾಗಿ ಹಾಡುಗಳಾಗಿದ್ದವು. ಅವರ ಕಾವ್ಯ ಖುಷಿಗಾಗಿ ಹುಟ್ಟಿದ್ದಲ್ಲ, ಅವರ ಎದೆಯಾಳದಿಂದ ಬಂದ ನೋವಿನ ಗೀತೆಗಳವು. ದಲಿತ ಚಳವಳಿ ಹುಟ್ಟುವುದಕ್ಕೆ ಮೊದಲೇ ಅವರು ತಮ್ಮ ಕಾವ್ಯದ ಮೂಲಕ ದಲಿತ ಮತ್ತು ಶೋಷಿತರನ್ನು ಎಚ್ಚರಿಸಿ ದಲಿತ ಚಳವಳಿಗೆ ಮುನ್ನಡಿ ಬರೆದಿದ್ದರು. ಹಾಗಾಗಿ ಅವರ ಕಾವ್ಯ ಶೋಷಿತರ ಕಾವ್ಯ. ಜನರ ಕಾವ್ಯ. ಯಾವುದೇ ಒಬ್ಬ ಕವಿಯ ಕಾವ್ಯ ಜನರ ಕಾವ್ಯ ಆದಾಗ ಮಾತ್ರ ಶ್ರೇಷ್ಠ ಕಾವ್ಯ ಆಗುತ್ತದೆ. ಅಂತಹ ಶ್ರೇಷ್ಠ ಕಾವ್ಯ ಬರೆದ ಸಿದ್ದಲಿಂಗಯ್ಯ ಭೌತಿಕವಾಗಿ ನಮ್ಮನ್ನು ಅಗಲಿದ್ದರೂ, ಬರಹಗಳ ಮೂಲಕ ಎಂದೆಂದಿಗೂ ಜೀವಂತವಾಗಿರುತ್ತಾರೆ ಎಂದ ವಿಜಯಲಕ್ಷ್ಮಿ ಅವರು, ಸಿದ್ದಲಿಂಗಯ್ಯ ಅವರು ಅಂಬೇಡ್ಕರ್ ಮತ್ತು ಲೋಹಿಯಾ ವಾದದಿಂದ ಪ್ರಭಾವಿತರಾಗಿದ್ದರು. ಅವರದ್ದು ಕರುಳ ಭಾಷೆಯಾಗಿ ಜನರ ಬಾಯಿಯಲ್ಲಿ ಸದಾ ಮೊಳಗುವಂತೆ ಜನಪದ ಭಾಷೆಯಾಗಿದೆ ಎಂದು ತಿಳಿಸಿದರು.

ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ನ ಗಾಯಕರು ಸಿದ್ದಲಿಂಗಯ್ಯನವರ "ಗುಡಿಸಲಿನಲ್ಲಿ ಅರಳಿದ ಗುಲಾಬಿ ನನ್ನ ಸಾವಿನ ಕವನ" ಗೀತೆ ಸೇರಿದಂತೆ ಕವಿ ಸಿದ್ದಲಿಂಗಯ್ಯನವರ ಹಲವು ಗೀತೆಗಳನ್ನು ಮನಮುಟ್ಟುವಂತೆ ಸುಶ್ರಾವ್ಯವಾಗಿ ಹಾಡಿದರು. ಕಾರ್ಯಕ್ರಮದಲ್ಲಿ ಕವಿ,

ಚಿಂತಕ ಮಲ್ಲುಂಡಿ ಮಹದೇವಸ್ವಾಮಿ, ಪ್ರಜ್ಞಾ ಟ್ರಸ್ಟ್ ಅಧ್ಯಕ್ಷ ಸೋಸಲೆ ಸಿದ್ದರಾಜು, ಕಾರ್ಯದರ್ಶಿ ಕೆ.ಎಂ.ಶಿವರಾಜು, ಆಕಾಶವಾಣಿಯ ಡಾ.ಕುಮಾರ್, ಕನ್ನಡ ಹೋರಾಟಗಾರ ಆರ್.ಎ. ರಾಧಾಕೃಷ್ಣ ಸೇರಿದಂತೆ ಇನ್ನಿತರರು ಇದ್ದರು.

## ಜಾನುವಾರುಗಳಿಗೆ ಕಾಲುಬಾಯಿ ಜ್ವರ ಲಸಿಕೆ

ಚಾಮರಾಜನಗರ : ಜಾನುವಾರುಗಳಿಗೆ ಕಾಲುಬಾಯಿ ಜ್ವರ ಸಾಂಕ್ರಾಮಿಕ ರೋಗ ಬಾಧಿಸುತ್ತಿರುವ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳ ಜಾನುವಾರುಗಳಿಗೆ ಲಸಿಕೆ ನೀಡಲು ಅರಣ್ಯ ಇಲಾಖೆ ಮುಂದಾಗಿದೆ.

ಪಶುಸಂಗೋಪನಾ ಇಲಾಖೆಯು ಇನ್ನೂ ಅಭಿಯಾನ ಆರಂಭಿಸದಿರುವುದರಿಂದ ಜಾನುವಾರುಗಳಿಂದ ವನ್ಯಜೀವಿಗಳಿಗೆ ಈ ಸಾಂಕ್ರಾಮಿಕ ರೋಗ ಹರಡದಂತೆ ಅರಣ್ಯ ಇಲಾಖೆ ಮುನ್ನೆಚ್ಚರಿಕೆ ವಹಿಸಿದೆ.

12 ಸಾವಿರ ಲಸಿಕೆ ಖರೀದಿಸಿ ಪಶುಸಂಗೋಪನೆ ಇಲಾಖೆಗೆ ಹಸ್ತಾಂತರಿಸಲು ಬಂಡೀಪುರ ಸಿಎಫ್ ನಿರ್ಧಸಿದ್ದಾರೆ.

ಗುಂಡ್ಲುಪೇಟೆ ತಾಲೂಕಿನಲ್ಲಿ 73,250 ಜಾನುವಾರುಗಳಿದ್ದು, ಕಾಡಂಚಿನ 89 ಗ್ರಾಮಗಳ 29,047 ಜಾನುವಾರುಗಳಲ್ಲಿ 1,661 ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ. ಉಳಿದ ಜಾನುವಾರುಗಳಿಗೆ ಲಸಿಕೆ ಹಾಕಲು ಬಂಡೀಪುರ ಹುಲಿ ಸಂರಕ್ಷಣಾ ಪ್ರತಿಷ್ಠಾನ ನಿಧಿಯಿಂದ 12 ಸಾವಿರ ಲಸಿಕೆ ಖರೀದಿಸಲಾಗುತ್ತಿದೆ.

ಕುಂದಕೆರೆ ವಲಯದಲ್ಲಿ ಈಗಾಗಲೇ ಲಸಿಕೆ ನೀಡುವ ಕಾರ್ಯಕ್ರಮ ಭರದಿಂದ ಸಾಗಿದೆ.



## ಖತರ್ನಾಕ್ ಬೈಕ್ ಖದಿಮರ ಬಂಧನ : ಆರು ಬೈಕ್ ವಶ

ಹನೂರು: ಚಾಲಕ ವೃತ್ತಿ ಜೊತೆಗೆ ಬೈಕ್ ಗಳನ್ನು ಕಳುವು ಮಾಡುವುದನ್ನೇ ವೃತ್ತಿಯನ್ನಾಗಿಸಿಕೊಂಡಿದ್ದ ಖತರ್ನಾಕ್ ಬೈಕ್ ಖದಿಮನನ್ನು ಹನೂರು ಪೊಲೀಸರು ಬಂಧಿಸಿ 6 ಬೈಕ್‌ಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.




ಬಂಧಿತ ಆರೋಪಿಯನ್ನು ಹಾಲಿ ವಾಸ ಬೆಂಗಳೂರು ವಿಜಯನಗರ ಮೂಡ್ಲು ಪಾಳ್ಯ 3ನೇ ಕ್ರಾಸ್ ಕಾರ್ಮಲ್ ಸ್ಕೂಲ್ ಎದುರು ವಾಸವಾಗಿರುವ ಮಡಿವಾಳ ಶೆಟ್ಟಿ ಜನಾಂಗಕ್ಕೆ ಸೇರಿದ ಸಿದ್ದರಾಜು ಬಿನ್ ಮುನಿಯಪ್ಪ (27) ಗುರುತಿಸಲಾಗಿದೆ.

ಬಂಧಿತನಿಂದಸುಮಾರು 5 ಲಕ್ಷರೂ. ಮೌಲ್ಯದ3 ಪಲ್ಸರ್ ಬೈಕ್, 3 ಸ್ಪ್ಲೆಂಡರ್ ಬೈಕ್ ಒಟ್ಟು 6 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣದ ದಾಖಲಿಸಿರುವುದಾಗಿ ಡಿವೈಎಸ್‌ಪಿ ನಾಗರಾಜ್ ಮಾಹಿತಿ ನೀಡಿದರು.

**ಘಟನೆ ವಿವರ:** ಬೈಕ್ ಕಳ್ಳತನ ಆಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿವ್ಯಾ ಸಾರಾಥಾಮಸ್, ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಕೆ.ಸುಂದರಾಜ್, ಕೊಳ್ಳೇಗಾಲ ಉಪವಿಭಾಗದ ಡಿವೈಎಸ್‌ಪಿ ನಾಗರಾಜು ಅವರುಗಳ ಮಾರ್ಗದರ್ಶನದಲ್ಲಿ ಒಂದು ತಂಡವನ್ನು ರಚಿಸಿ ಕಾರ್ಯಾಚರಣೆಗೆ ಇಳಿದಿತ್ತು.

ಬೈಕ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬಂಧಿಸುವಲ್ಲಿ ಮಾಹಿತಿಯನ್ನಾಧರಿಸಿ ಕಾರ್ಯಾಚರಣೆಗೆ ಇಳಿದಿದ್ದ ಹನೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ನೇತೃತ್ವದ ಪೊಲೀಸ್ ಸಿಬ್ಬಂದಿಗಳಾದ ಮುಖ್ಯಪೇದೆ ಕೃಷ್ಣ, ಪೇದೆಗಳಾದ ಸಕ್ರುನಾಯ್ಕ್, ರಾಮಶೆಟ್ಟಿ, ಶಿವಕುಮಾರ್, ಬಿಳಿಗೌಡ ಜೀಪ್ ಚಾಲಕ ಶಿವಕುಮಾರ್ ತಂಡದವರು ಕಳೆದ ಜೂ.18ರಂದು ಪಟ್ಟಣದ ಕ್ರಿಸ್ತರಾಜ ಶಾಲೆ ಬಳಿ ವಾಹನಗಳನ್ನು ತಪಾಸಣೆ ನಡೆಸುತ್ತಿದ್ದ ವೇಳೆ ಬಂಡಳ್ಳಿ ಮಾರ್ಗವಾಗಿ ಬಂದಆರೋಪಿ ಪೊಲೀಸರನ್ನು ಕಂಡು ವಾಹನವನ್ನು ಹಿಂತಿರುಗಿಸಿಕೊಂಡು ಹೋಗುತ್ತಿರುವ ಬಗ್ಗೆ ಅನುಮಾನಗೊಂಡ ಪೊಲೀಸರು ಆತನನ್ನು ತಡೆದು ವಿಚಾರಿಸಿದಾಗ ತನ್ನ ಹೆಸರು ಮತ್ತು ವಿಳಾಸವನ್ನು ಕೇಳಲಾದ ಸಂದರ್ಭದಲ್ಲಿ ತಡಬಡಾಯಿಸಿ ತನ್ನ ಹಾಲಿ ವಾಸದ ಬಗ್ಗೆ ತಿಳಿಸಿದ್ದಾನೆ.

ನಂತರ ಪೊಲೀಸರು ಆರೋಪಿ ಓಡಿಸಿಕೊಂಡು ಬಂದಬೈಕ್ ಬಗ್ಗೆ ಮಾಹಿತಿ ಕೇಳಿದಾಗ ಆರೋಪಿ ವರ್ತನೆ ಅನುಮಾನಸ್ಪದವಾಗಿರುವುದನ್ನು ಕಂಡು ಕೂಲಂಕುಷವಾಗಿ ವಿಚಾರ ಮಾಡಿದಾಗ ತಾನು ಈ ಹಿಂದೆ ಬೆಂಗಳೂರಿನ ಪಟಗಾರ್ ಪಾಳ್ಯದಲ್ಲಿ ಸದರಿ ಬೈಕ್‌ನ್ನು ಕಳ್ಳತನ ಮಾಡಿ ಇದುವರೆಗೆತಾನೇ ಓಡಿಸಿಕೊಂಡು ತನ್ನ ಬಳಿಯೇ ಇಟ್ಟುಕೊಂಡಿದ್ದು, ಅದನ್ನು ಮಾರಾಟ ಮಾಡಲು ಸೋದರ ಮಾವಗ್ರಾಮವಾದ ಬಂಡಳ್ಳಿಗೆ ವಾರದ ಹಿಂದೆ ಬಂದಿದ್ದೆ ಬೈಕನ್ನು ಮಾರಾಟ ಮಾಡಲು ಯಾರಾದರು ಗಿರಾಕಿಗಳು ಸಿಗಬಹುದು ಎಂದು ಬಂಡಳ್ಳಿಯಿಂದ ಹನೂರಿಗೆ ಬಂದೆ ಎಂದು ತಿಳಿಸಿದ್ದಾನೆ.

ಈ ಹಿನ್ನಲೆಯಲ್ಲಿ ಹನೂರು ಪೊಲೀಸರು ಮೊಕದಮ್ಮೆ ನಂ.97/2021 ಕಲಂ 41 (ಡಿ) 102 ಸಿಆರ್‌ಪಿಸಿ ಮತ್ತು 379 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ತನಿಖೆಕೈಗೊಂಡಾಗಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ಆರೋಪಿಯು ತನಿಖೆ ಸಮಯದಲ್ಲಿತಾನು ಬೆಂಗಳೂರು ನಗರದಲ್ಲಿ ಈ ಹಿಂದೆಇನ್ನೂ ಹಲವು ಬೈಕ್‌ಗಳನ್ನು ಕಳ್ಳತನ ಮಾಡಿ ಬಂಡಳ್ಳಿ ಗ್ರಾಮದ ತನ್ನ ಪರಿಚಯಸ್ಥರು ಹಾಗೂ ಸ್ನೇಹಿತರಿಗೆ ಮಾರಾಟ ಮಾಡಿದ್ದಾಗಿ ತಪ್ಪೊಪ್ಪಿಕೊಂಡ ಮೇರೆಗೆ ಉಳಿದ 2 ಪಲ್ಸರ್ ಬೈಕ್, 3 ಸ್ಪ್ಲೆಂಡರ್ ಬೈಕ್‌ನ್ನು ವಶಕ್ಕೆ ಪಡೆದಿದ್ದಾರೆ.

**ಪೊಲೀಸರ ಕಾರ್ಯಕ್ಕೆಎಸ್.ಪಿ ಅವರಿಂದ ಶ್ಲಾಘನೆ ಮತ್ತು ಬಹುಮಾನ:**

ಲಕ್ಷಾಂತರ ರೂ. ಮೌಲ್ಯದ ಬೈಕ್‌ಗಳನ್ನು ಕಳುವು ಮಾಡುತ್ತಿದ್ದ ಆರೋಪಿಯನ್ನು ಪತ್ತೆ ಹಚ್ಚಿಮುಂದೆಆಗುತ್ತಿದ್ದ ಅನಾಹುತಗಳನ್ನು ತಪ್ಪಿಸುವಲ್ಲಿ ಯಶಸ್ವಿಯಾದ ಹನೂರು ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಪೊಲೀಸ್ ತಂಡದ ಕಾರ್ಯಕ್ಕೆ ಶ್ಲಾಘನೆ ವ್ಯಕ್ತಪಡಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿವ್ಯಾ ಸಾರಾಥಾಮಸ್‌ರವರು ಉತ್ತಮ ಕೆಲಸಕ್ಕಾಗಿ ಬಹುಮಾನವನ್ನು ಘೋಷಿಸಿದ್ದಾರೆ.

ಡಿವೈಎಸ್‌ಪಿ ನಾಗರಾಜು ಉಪಸ್ಥಿತಿಯಲ್ಲಿ ಆರೋಪಿಯುನ್ನು ಬೈಕ್‌ಗಳ ಸಮೇತ ಮಾಧ್ಯಮಗಳ ಮುಂದೆ ಹಾಜರು ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಹನೂರು ಪೊಲೀಸ್ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಸೇರಿದಂತೆತಾಣಾ ಸಿಬ್ಬಂದಿಗಳು ಇದ್ದರು.

ಕ್ರಾಂತಿಯಕಿಡಿ
# ಕಾಯಕಯೋಗಿ
KAYAKAYOGI-MORNING DAILY ಕನ್ನಡ ದಿನಪತ್ರಿಕೆ



ಬೋರೇಗೌಡ, ಅಧ್ಯಕ್ಷರು.


ಸುವರ್ಣ, ಉಪಾಧ್ಯಕ್ಷರು.

## ಕೊರೋನಾ ವಿರುದ್ಧ ಜನಜಾಗೃತಿ

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಸರ್ಕಾರದ ನಿಯಮಾವಳಿಗಳಂತೆ ಕೋವಿಡ್-19 ನಿಯಂತ್ರಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.


ಆರ್.ಶಿಲ್ಪ, ಪಿಡಿಒ.

**ಶ್ರೀವಾಣಿ** ಅತ್ಯಮೂಲ್ಯವಾದ ಸಮಯವನ್ನು ಸದುಪಯೋಗಪಡಿಸಿಕೊಳ್ಳಲಿ ಬಿಡಲಿ ಅದು ನಮ್ಮ ಪಾಲಿಗೆ ಎಂದೆಂದಿಗೂ ವ್ಯಯವಾಯಿತೆಂದೇ ತಿಳಿಯಬೇಕು. ಸದ್ವಿನಿಯೋಗವಾದಾಗ ಮಾತ್ರ ಅದಕ್ಕೆ ಸಾರ್ಥಕತೆ; ಹಣ ಖರ್ಚಾದರೆ ಪುನಃ ಗಳಿಸಬಹುದು. ಆದರೆ ಕಾಲ ಜಾರಿದರೆ ಅದು ಮತ್ತೆ ದೊರೆಯುವುದಿಲ್ಲ. - ಸಿದ್ಧಗಂಗಾಶ್ರೀ

# ಕೋವಿಡ್ ವಿರುದ್ಧ ಕೆ.ಶೆಟ್ಟಿಹಳ್ಳಿ ಗ್ರಾ.ಪಂ. ಸಮರ

## ಸಮರೋಪಾದಿಯಲ್ಲಿ ಮುಂಜಾಗೃತ ಕ್ರಮ : ಗ್ರಾಮ ಸ್ವಚ್ಚತೆಗೆ ಆಧ್ಯತೆ : ಅಧ್ಯಕ್ಷರು-ಸದಸ್ಯರಿಂದ ಜನಜಾಗೃತಿ

ಮಂಡ್ಯ : ಶ್ರೀರಂಗಪಟ್ಟಣ ತಾಲೂಕಿನ ಕೆ.ಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಮಹಾಮಾರಿ ಕೋವಿಡ್-19 2ನೇ ಅಲೆ ವಿರುದ್ದ ಸಮರೋಪಾದಿಯಲ್ಲಿ ಮುಂಜಾಗೃತ ಕ್ರಮ ಕೈಗೊಳ್ಳಲಾಗಿದೆ.

ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರ ಮಾರ್ಗದರ್ಶನದಲ್ಲಿ ಪಂಚಾಯಿತಿ ಪಿಡಿಒ ಮತ್ತು ಸಿಬ್ಬಂದಿಗಳು ಗ್ರಾಮದ ಜನತೆಗೆ ಸ್ಯಾನಿಟೈಸರ್, ಮಾಸ್ಕ್ ವಿತರಿಸುವುದರ ಜೊತೆಗೆ ಚರಂಡಿ, ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಚತೆಗೆ ಆಧ್ಯತೆ ನೀಡಿದ್ದಾರೆ.

ಕೋವಿಡ್-19 ಸಾಂಕ್ರಾಮಿಕರೋಗವಾಗಿದ್ದು, ನಿಯಂತ್ರಣಕ್ಕಾಗಿ ಗ್ರಾಮಮಟ್ಟದಲ್ಲಿ ಲಾಕ್‌ಡೌನ್ ಜಾರಿಗೊಳಿಸಿರುವ ಬಗ್ಗೆ, ಸಾಮಾಜಿಕ ಅಂತರ ಅನುಸರಿಸುತ್ತಿರುವ ಬಗ್ಗೆ, ವಿದೇಶದಿಂದ ಮತ್ತು ಬೇರೆ ರಾಜ್ಯದಿಂದ ಬಂದಿರುವವರನ್ನು ಕ್ವಾರಂಟೈನ್‌ನಲ್ಲಿ ಇರಿಸಿರುವ ಬಗ್ಗೆ, ಕೂಲಿ ಮಾಡುವವರಿಗೆ ಮತ್ತು ನಿರ್ಗತಿಕರಿಗೆ ಆಹಾರವನ್ನು ವಿತರಣೆ ಮಾಡುತ್ತಿರುವ ಬಗ್ಗೆ ಮತ್ತು ಅಗತ್ಯ ವಸ್ತುಗಳ ಪೂರೈಕೆ ಮಾಡಲಾಗಿದೆ.

ಸರ್ಕಾರದ ಘೋಷಣೆಯಂತೆ ಗ್ರಾ.ಪಂ. ವ್ಯಾಪ್ತಿಯಲ್ಲಿ ಲಾಕ್‌ಡೌನ್ ನಿಯಮಾವಳಿಗಳನ್ನು ಕಡ್ಡಾಯವಾಗಿ ಜಾರಿಗೆ ತರಲಾಗಿದ್ದು ಜನರಲ್ಲಿ ಮಹಾಮಾರಿ ಕರೋನಾ ವಿರುದ್ಧ ಹೋರಾಡಬೇಕಾದ ಅವಶ್ಯಕತೆ ಮತ್ತು ಮುಂಜಾಗೃತ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲಾಗಿದೆ. ಜನತಾ ಕರ್ಫ್ಯೂ ಯಶಸ್ವಿಯಾಗಿ ಆಚರಿಸಲಾಗಿದೆ.

ಕರೋನಾ ವಿರುದ್ಧ ಹೋರಾಡುತ್ತಿರುವ ವೈದ್ಯಕೀಯ ಸಿಬ್ಬಂದಿಗಳು, ಪೋಲಿಸ್ ಇಲಾಖೆ ಮತ್ತು ಪೌರಕಾರ್ಮಿಕರಿಗೆ ಧನ್ಯವಾದಗಳನ್ನು ತಿಳಿಸುವ ಸಲುವಾಗಿ ಮಾಸ್ಕ್, ಔಷಧಿ ಹಾಗೂ ಆಹಾರ ಕಿಟ್‌ಗಳನ್ನು ನೀಡಲಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ಲಾಕ್ ಡೌನ್ ನಿಯಮಾವಳಿಗಳನ್ನು ಸಾರ್ವಜನಿಕರು ಪಾಲಿಸುವಂತೆ ಅರಿವು ಮೂಡಿಸಲಾಗಿದೆ.



ಕರ್ನಾಟಕ ಸರ್ಕಾರ ಕೋವಿ ಡ್-19 ನಿಯಂತ್ರಣಕ್ಕಾಗಿ ನೀಡುವ ಎಲ್ಲಾ ಸೂಚನೆಗಳನ್ನು ಹಾಗೂ ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತ ನೀಡುವ ಎಲ್ಲಾ ಸೂಚನೆಗಳನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಸಾರ್ವಜನಿಕರು ಪಾಲಿಸಿ ಕ್ರಮವಹಿಸಲಾಗುತ್ತಿದೆ.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೋವಿಡ್-19 ಪ್ಲೈಯಿಂಗ್ ಸ್ಕ್ವಾರ್ಡ್‌ಗಳ ತಂಡವನ್ನು ರಚಿಸಿ, ಈಗಾಗಲೇ HOME QUARANTINE ನಲ್ಲಿ ಇರುವ ವ್ಯಕ್ತಿಗಳ ಮೇಲೆ ತೀವ್ರ ನಿಗಾವಹಿಸಿ ಸಾರ್ವಜನಿಕ ಆರೋಗ್ಯದ ದೃಷ್ಠಿ ಮತ್ತು ಸಾಂಕ್ರಾಮಿಕರೋಗ ತಡೆಗಟ್ಟುವ ನಿಟ್ಟಿನಲ್ಲಿ ಸಾಮಾಜಿಕಅಂತರ ಕಾಯ್ದು ಕೊಳ್ಳುವ (Social Distancing) ಬಗ್ಗೆ ಪರಿಣಾಮಕಾರಿ ಕ್ರಮಗಳನ್ನು ಅನುಷ್ಠಾನ 'ಗೊಳಿಸಲು ಸಾರ್ವಜನಿಕರಿಗೆ ಮಾಹಿತಿ ನೀಡಿ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

ಜಿಲ್ಲಾಧಿಕಾರಿಗಳ ಆದೇಶ ದಂತೆ, ಕೋವಿಡ್-19 (ಕೊರೊ ನಾ ವೈರಸ್) ಸಾಂಕ್ರಾಮಿಕರೋಗ ಹರಡದಂತೆ ಮುಂಜಾಗ್ರತ ಕ್ರಮ ಕೈಗೊಂಡು ಜನರಿಗೆ ಅಗತ್ಯ ಸೇವೆ ನೀಡಲು ಹಾಗೂ ಕುಡಿಯುವ ನೀರು, ನೈರ್ಮಲ್ಯತೆ ದೃಷ್ಠಿಯಿಂದ ಅಗತ್ಯ ಕ್ರಮ ವಹಿಸಲಾಗಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದ್ವಿತೀಯದರ್ಜೆ ಲೆಕ್ಕ ಸಹಾಯಕರುಗಳು, ಬಿಲ್ ಕಲೆಕ್ಟರ್‌ಗಳು, ಡಾಟಾ ಎಂಟ್ರಿ ಆಪರೇಟರ್‌ಗಳು, ವಾಟರ್‌ಮನ್‌ಗಳು, ಸ್ವಚ್ಛತಾಗಾರರು ನೌಕರರುಗಳು 24*7 ಕೇಂದ್ರ ಸ್ಥಾನದಲ್ಲಿ ಇದ್ದು ಕರ್ತವ್ಯ ನಿರ್ವಹಿಸಲು ಸೂಚಿಸಿ, ಸಾರ್ವಜನಿಕರಿಗೆ ಅಗತ್ಯ ಸೇವೆಯನ್ನು ಒದಗಿಸಿ ಕೋವಿಡ್-19 (ಕೊರೊನಾ ವೈರಸ್) ಹರಡ ದಂತೆ ಹೆಚ್ಚಿನ ಮಾಹಿತಿ ನೀಡುವಂತೆ ತಿಳಿಸಿದೆ. ಹಾಗೂ ಗ್ರಾಮ ಪಂಚಾಯಿತಿಯ ಗ್ರಾಮಗಳಲ್ಲಿಯೇ ಜನ ಸಾಮಾನ್ಯರಿಗೆ ಬೇಕಾಗುವಂತಹ ಸೊಪ್ಪು-ತರಕಾರಿಗಳನ್ನು ಗ್ರಾಮದ ಒಳಗಡೆಯಲ್ಲಿಯೇ ಮಾರಾಟ ಮಾಡುವಂತೆ ಕ್ರಮ ವಹಿಸುವುದು ಹಾಗು ಗ್ರಾಮೀಣ ಕೊರೋನಾ ನಿಯಂತ್ರಣ : ಗ್ರಾ.ಪಂ. ವ್ಯಾಪ್ತಿಯ ಗ್ರಾಮಗಳಲ್ಲಿ ಕೋವಿಡ್ ನಿಯಂತ್ರಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಈ ಭಾಗದಲ್ಲಿ ಬೆಳೆದಿರುವಂತಹ ತರಕಾರಿಗಳನ್ನು ಅಲ್ಲಿಯೇ ಸ್ಥಳೀಯವಾಗಿ ಮಾರಾಟ ಮಾಡಲು ಮತ್ತು ರೈತ ಸಮುದಾಯಕ್ಕೆ ಅನುಕೂಲ ವಾಗುವಂತೆ ಕ್ರಮವಹಿಸಲು ತಿಳಿಸಲಾಗಿದೆ.

ಪಂಚಾಯಿತಿ ವ್ಯಾಪ್ತಿಯಲ್ಲಿ ಜನ ಸಾಮಾನ್ಯರಿಗೆ ಅಗತ್ಯವಾಗಿ ಬೇಕಾಗುವ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಕಲ್ಪಿಸುವುದು. ಗ್ರಾಮೀಣ ಪ್ರದೇಶದಲ್ಲಿ ಎಲ್ಲಾ ಅಂಗಡಿ ಮತ್ತು ಟೀ ಸ್ಟಾಲ್‌ಗಳನ್ನು ಸಂದರ್ಭನುಸಾರವಾಗಿ ಮುಚ್ಚುವಂತೆ ಅಗತ್ಯ ಕ್ರಮ ವಹಿಸಲಾಗಿದೆ.

ಗ್ರಾಮಗಳಲ್ಲಿ ಗ್ರಾಮ ಮಟ್ಟದಕಾರ್ಯಪಡೆ (Village Taskforce) ಸಮಿತಿಯನ್ನು ರಚಿಸುವುದು ಹಾಗೂ ಕಾರ್ಯಪ್ರವೃತ್ತರಾಗುವುದು. ನಿರ್ಗತಿಕರಿಗೆ ಹಾಗೂ ಆಹಾರ ಅವಶ್ಯಕವಾಗಿರುವವರಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೂಲಕ ಆಹಾರ ವಿತರಿಸಲು ಅಗತ್ಯಕ್ರಮವಹಿಸಲಾಗಿದೆ. ರೈತರು ಬೆಳೆದ ಹಣ್ಣು, ತರಕಾರಿಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಜನರಿಗೆ ಅಗತ್ಯ ಇರುವಷ್ಟು ಗ್ರಾಮ ಪಂಚಾಯಿತಿ ವತಿಯಿಂದ ಖರೀದಿಸಿ ಜನರಿಗೆ ಮನೆ ಮನೆಗಳಿಗೆ ವಿತರಿಸಲು ಅಗತ್ಯ ಕ್ರಮವಹಿಸಲಾಗಿದೆ.

ಪ್ರತಿ ಗ್ರಾಮದಲ್ಲಿ ಯುವಕರ ತಂಡ ಮಾಡಿ, ತಂಡಕ್ಕೆ ಅಗತ್ಯ ಸೇವೆಗಳನ್ನು ಒದಗಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕ್ರಮ ಕೈಗೊಂಡಿದ್ದು ಕೋವಿಡ್-19 ನಿರ್ಮೂಲನೆಗಾಗಿ ಅತ್ಯಂತ ಜಾಗರೂಕತೆಯಿಂದ ಕಾರ್ಯನಿರ್ವಹಿಸಲಾಗುತ್ತಿದೆ.



**ಮನೆಯಲ್ಲಿಯೇ ಇರಿ ಸುರಕ್ಷಿತವಾಗಿರಿ**



### ಗ್ರಾ.ಪಂ.ವ್ಯಾಪ್ತಿಯ ಹಳ್ಳಿಗಳಲ್ಲಿ ಕೋವಿಡ್-19 ಜನಜಾಗೃತಿ

- ಕೋವೀಡ್‌ಕಾರ್ಯಪಡೆಯ ಸದಸ್ಯರುಗಳ ಸಭೆ.
- ಸೋಂಕಿತರ ಮನೆಗಳಿಗೆ ಸ್ಯಾನೀಟೈಜರ್
- ಸಾರ್ವಜನಿಕ ಸ್ಥಳಗಳಲ್ಲಿ ಸ್ಯಾನೀಟೈಜರ್
- ಲಾಕ್‌ಡೌನ್ ಬಗ್ಗೆ ಸಾರ್ವಜನಿಕರಿಗೆ ಅರಿವು
- ಹೋಂ ಐಸೋಲೇಷನ್ ಮನೆಗೆ ಭೇಟಿ
- ಅಂಗನವಾಡಿ ಕೇಂದ್ರಕ್ಕೆ ಸ್ಯಾನೀಟೈಜರ್
- ಹೋಟೇಲ್ ಮತ್ತು ಅಂಗಡಿಗಳಿಗೆ ನೋಟೀಸ್
- ಕೋವೀಡ್ ಕಾರ್ಯಪಡೆ ಸದಸ್ಯರುಗಳ ಸಭೆ
- ಆಹಾರಕೀಟ್ ಹಾಗೂ ಸುರಕ್ಷಿತಾ ಕಿಟ್ ವಿತರಣೆ
- ಮಾಸ್ಕ್ - ಸ್ಯಾನಿಟೈಸರ್ ವಿತರಣೆ















Published and Owned by : Smt ARUNA JYOTHI.B.K. From No. 292, Basaveshwara Nilaya, Basaveshwara Maarga,Kaveri Nagar, Mandya Printed by : PUTTASWAMY,9th Cross, Vinoba Road,Subash Nagar, Mandya-571401, Mandya Dist. Karnataka. Editor : ARUNA JYOTHI.B.K.